ತೂರಿಯ ಕಥೆ

ಕಡೆಂಗೋಡ್ಲು ಶಂಕರಭಟ್ಟ

(ಹೂದೋಟ ಎಂಬ ಪ್ರಾತಿನಿಧಿಕ ಕಥಾಸಂಗ್ರಹದಿಂದ ಪುನರ್ಮುದ್ರಿತ)

ಪ್ರಕಾಶಕರು:

ಯು. ಆರ್. ಶೆಣೈ ಎಂಡ್ ಸನ್ಸ್,
ರಥಬೀದಿ, ಮಂಗಳೂರು.

ಚೂರಿಯ ಕಥೆ

ಕಡೆಂಗೋಡ್ಲು ಶಂಕರ ಭಟ್ಟ

ಪ್ರಕಾಶಕರು:

ಯು. ಆರ್. ಶೆಣೈ ಎಂಡ್ ಸನ್ಸ್,

ರಥಬೀದಿ, ಮಂಗಳೂರು.

ಬೆಲೆ: 0-6-0

ಚೂರಿಯ ಕಥೆ

ಇತ್ತೀಚೆಗೆ ನನ್ನ ತಾಯಿಯ ಒತ್ತಾಸೆಯೋ ಒತ್ತಾಸೆ—ನಾನು ಬೊಂಬಯಿ ನಗರವನ್ನು ಬಿಟ್ಟು ಊರಿನಲ್ಲಿಯೇ ಬೇರೂರಬೇಕೆಂದು. "ಮಗು! ಬಂದು ಬಿಡು. ಆ ಬೊಂಬಯಿಯ ತಂಟೆ ಬೇಡ" ಎಂದು ತಿಂಗಳಿಗೆ ಒಮ್ಮೆಯಾದರೂ ಬರೆಯುತ್ತಲೇ ಇದ್ದಳು. ನನ್ನಮ್ಮನ ವಯಸ್ಸು ಐವತ್ತೈದಾದರೂ ಮೂವತ್ತರ ಗಟ್ಟಿಮುಟ್ಟು; ಮಗನು ಬಳಿಯಲ್ಲಿಯೇ ಇರಬೇಕಾದ ಸ್ಥಿತಿ ಬಂದಿರಲಿಲ್ಲ. ತಂದೆ ಸತ್ತ ಮೊದಲುಗೊಂಡು ನಾವು ವಾಸವಾಗಿದ್ದುದು ಮಾವನ ಮನೆಯಲ್ಲಿ. ಮಾವನಿಗೆ ಅಕ್ಕನೆಂದರೆ ಪ್ರಾಣ. ಅವರ ಹೆಂಡತಿ, ನನ್ನತ್ತೆ, ಅತ್ತಿಗೆಯಲ್ಲಿ ಕೇಳದೆ ಒಲೆಗೆ ಬೆಂಕಿ ಹಚ್ಚುವಹಾಗಿಲ್ಲ; ಅಷ್ಟು ಅನ್ಯೋನ್ಯ ಅವರಲ್ಲಿ. ಮಾವ ನನ್ನ ತಾಯಿಗೆ ಸೋದರನಾಗಿದ್ದುದು ಮಾತ್ರವಲ್ಲ; ಮಗನೂ ಆಗಿದ್ದ; ಪ್ರಪಂಚದಲ್ಲಿ ಏನೆಲ್ಲ ಆಗಿರಬಹುದೋ ಅದೆಲ್ಲ ಆಗಿದ್ದ. ಹೀಗಿದ್ದರೂ ತಾಯಿಯ ತಂಬೂರಿಯಲ್ಲಿ ಒಂದೇನಾದ— ನೀನು ಬೊಂಬಯಿಯ ತಂಟೆ ಬಿಡು ಮಗು! ಎಂದು. ನಾನು ಬೊಂಬಯಿಗೆ ತಂಟೆ ಮಾಡಿರಲಿಲ್ಲ; ಬೊಂಬಯಿ ನನಗೆ ತಂಟೆ ಮಾಡಿರಲಿಲ್ಲ. ಅಲ್ಪ ವಿದ್ಯನಾದ ಒಬ್ಬ ಪೋರನಿಗೆ ತಿಂಗಳೊಂದಕ್ಕೆ ಮುನ್ನೂರು ರೂಪಾಯಿಗಳನ್ನು ಕೊಡುತ್ತಿತ್ತು. ಈ ತಂಟೆಯನ್ನು ಬೇರಾವ ಊರಾದರೂ ಕೊಡಬಲ್ಲುದೆ? ನಮ್ಮ ಊರಲ್ಲಿ ಇದರ ನಾಲ್ಕನೆಯ ಒಂದಂಶ ಸಂಪಾದನೆಯಾದೀತೆ? ನಾನಲ್ಲಿ ಒಂದು ಜನವೇ ಅಲ್ಲ. ನನ್ನ ವಿದ್ಯೆಗೆ ಅಲ್ಲಿ ಒಂದು ಕಾಸು ಬೆಲೆಯಿಲ್ಲ. ನೇಗಿಲಿಗೆ ಕೈಕೊಡುವೆನೆಂದರೆ ಯಾರ ಹೊಲವನ್ನು ಉಳಬೇಕು? ಒಂದು ವೇಳೆ ನೆಲ ಹೊಲ ಎಲ್ಲ ಸಿಕ್ಕಿತೆಂದರೂ ಲೆಕ್ಕಣಿಕೆ ಹಿಡಿದು ಮರಕಟ್ಟಿ ಹೋದ ಬೆರಳುಗಳಿಗೆ ನೇಗಿಲಿನ ಹಿಡಿತವೇ ಮರೆತು ಹೋಗಿದೆ. ಊರಿನಲ್ಲಿ ಹೊಟ್ಟೆ ತುಂಬಿಸಲಾರದ ಹಗುರ ಮನುಷ್ಯನಾಗಿದ್ದರೂ ಚಿಂತೆಯಿಲ್ಲ; ಬರಲೇಬೇಕೆಂಬುದು ತಾಯಿಯ ಕಟ್ಟಪ್ಪಣೆ!

ತಾಯಿಯ ಈ ಆಗ್ರಹಕ್ಕೆ ಕಾರಣ ಇಲ್ಲದಿಲ್ಲ. ಕೊನೆಗೆ ವಿಚಾರಿಸಿ ನೋಡಲಾಗಿ ಪ್ರಾಣದಷ್ಟು ಅಮೂಲ್ಯವಾದ ವಸ್ತು ಇನ್ನೊಂದಿಲ್ಲ. ಮಾನ, ಮರ್ಯಾದೆ, ಸ್ಥಿತಿ, ಗತಿ ಎಲ್ಲ ಮತ್ತೆ. ಅವು ಯಾವುವು ಇಲ್ಲದಿದ್ದರೂ ಪ್ರಾಣ

ವೊಂದು ಉಳಿದರೆ ಸಾಕು. ಮುದಿ ವಿಧವೆಯೊಬ್ಬಳ ಏಕಮಾತ್ರ ಪುತ್ರನ ಪ್ರಾಣ. ಇದಕ್ಕಾಕೆ ಏನು ಬೆಲೆ ಕೊಡಲಾರಳು? ಯಾವ ಯಾತನೆ ಪಡಲಾರಳು? ಸ್ವಲ್ಪ ಕಾಲದ ಹಿಂದೆ ಬೊಂಬಯಿಯ ಹಡಗು ಕಟ್ಟೆಯ ಪ್ರದೇಶವೆಲ್ಲ ದೊಡ್ಡ ರಾಕ್ಷಸನಂತೆ ಎದ್ದು ಹಾರಿ ವಿಕಟತಾಂಡವ ಮಾಡಿದ ಸಮಾಚಾರವನ್ನು ಎಲ್ಲರೂ ಕೇಳಿದ್ದಾರೆ. ಚಿಕ್ಕ ದೊಡ್ಡ ಮನೆಗಳು ಕೂಡ ತೂಗುವ ತೊಟ್ಟಿಲಿನ ಹಾಗೆ ತೊನೆದಿದ್ದುವು. ಹಿಡಿದ ಬೆಂಕಿ ಒಂದು ತಿಂಗಳ ವರೆಗೆ ಆರಲಿಲ್ಲ. ಸುಡುವ ಒಡವೆಗಳನ್ನು ತಿಂದು ಬೆಂಕಿಗೂ ಅಜೀರ್ಣವಾದ ಹಾಗಿತ್ತು. ಕೊನೆಗಂತೂ ಬೆಂಕಿ ಆರಿತು. ಅಂದಿನಿಂದ ನನ್ನ ತಾಯಿಗೆ ಭೀತಿ. ನನ್ನ ವಾಸದ ಕೋಣೆ, ಕೆಲಸದ ಕಚೇರಿ, ಈ ಪ್ರದೇಶದಿಂದ ಎಷ್ಟೋ ದೂರದಲ್ಲಿದ್ದರೂ, ನನ್ನನ್ನು ಹುಡುಕಿಕೊಂಡೇ ಈ ವಿಪತ್ತು ಬಂದುದೆಂದು ಅಮ್ಮನ ಭಯ. ಈ ಘಟನೆ ನಡೆದು ಎರಡು ವಾರಗಳ ವರೆಗೆ ನನ್ನಿಂದ ಅಮ್ಮನಿಗೆ ಪತ್ರವಿರಲಿಲ್ಲ. ಈ ದಿನಗಳೆಂದರೆ ನನ್ನ ತಾಯಿಗೆ ಕಣ್ಣೀರು, ಗೋಳಾಟ, ಅರೆಯುಪವಾಸದ ದಿನಗಳಾಗಿದ್ದುವು. ನನ್ನ ಪತ್ರ ಕೈಸೇರಿದಂದು ಆಕೆ ಹೊಟ್ಟೆತುಂಬ ಉಂಡಳಂತೆ. ಆ ರಾತ್ರಿ ರೆಪ್ಪೆಗೆ ರೆಪ್ಪೆ ಕೂಡಿತಂತೆ.

ಇದಾದ ಮೇಲೆ ಇನ್ನೊಂದು ಅವಾಂತರ. ಅಂದು ಹಿಡಿದ ಬೆಂಕಿ ವಾರಗಳ ಅನಂತರವಾದರೂ ನಂದಿತು. ಇಂದಿನದು ಆರುವ ಹಾಗೆ ತೋರುವುದಿಲ್ಲ. ಹಿಂದುಗಳಂತೆ; ಮುಸುಲ್ಮಾನರಂತೆ; ಹಿಂದುಸ್ಥಾನವಂತೆ; ಪಾಕಿಸ್ತಾನವಂತೆ. ಈ ಸ್ಥಾನಗಳನ್ನು ರಚಿಸುವುದಕ್ಕೆ ಕೊಲೆಯೊಂದೇ ಉಪಾಯವಂತೆ. ಯಾರು ಯಾರನ್ನು ಕೊಲ್ಲುವುದೊ? ಏಕೆ ಕೊಲ್ಲುವುದೋ? ಕೊಂದು ದೊರೆಯುವುದೇನೋ! ಕೆಡುಕರಲ್ಲಿಯೂ ಸ್ವಪ್ರಯೋಜನ ಬುದ್ಧಿ ಇರುವುದುಂಟು. ಈ ತಲೆಹೋಕರಿಗೆ ಅದೂ ಇಲ್ಲ. ನಮ್ಮ ಮೈಯ ಮೇಲೆ ಸೊಳ್ಳೆ ಕಡಿಯಿತೆಂದು ಈಟಿಯನ್ನು ಪ್ರಯೋಗಿಸುವುದಿಲ್ಲ; ಮೈಗೆ ನೋವಾಗದಂತೆ ಸೊಳ್ಳೆ ಸಾಯುವಂತೆ, ಹೊಡೆಯುತ್ತೇವೆ. ಹತ್ಯಾಕಾರಿಗಳೆಂದರೆ ರೋಗಕೀಟಕಗಳೆಂಬುದು ನಿಜ. ಇವುಗಳನ್ನು ಹೊಡೆದು ಹಾಕ ಬೇಕಾದರೆ ಹಾಕೋಣ. ಆದರೆ ಒಡಲು ಮುರಿಯುವಂತೆ ಹೊಡೆಯುವುದೇ? ಇಂದಿನ ಕ್ರಮದಲ್ಲಿ ರೋಗಕೀಟಗಳು ಸಾಯುತ್ತವೆ. ಅವು ಸತ್ತು, ಬದುಕಬೇಕಾದ ಜನರೂ ಸಾಯುತ್ತಾರೆ. ರೋಗ ಹಬ್ಬುತ್ತಿದೆ. ಹೀಗೆಲ್ಲ ತರ್ಕ ಹೂಡುವುದು ಯಾರಲ್ಲಿ? ತಲೆಕೆಟ್ಟವರ ನಡುವೆ ತಲೆಕೆಡಿಸಿಕೊಳ್ಳುವುದೇ ಸಭ್ಯತೆಯಲ್ಲವೆ?

ನನ್ನಮ್ಮನ ಭಾವನೆಯಂತೆ ಬೊಂಬಯಿಯಲ್ಲಿ ಇಷ್ಟೆಲ್ಲ ದುರ್ಘಟ

ಗಳಾಗುತ್ತಿರುವುದು ನನ್ನೊಬ್ಬನ ಕೇಡಿಗಾಗಿ. ಭೀತಿಗೆ ಭೀತಿಯೇ ತಾಯಿ ಬೇರು. ಭೀತಿಗೆ ಭೀತಿಯೆ ಚಿಗುರು—ಕಾಯಿ—ಹಣ್ಣು. ಸಮಾಧಾನ ಪಡಿಸಲು ನಾನೆಷ್ಟು ಬರೆದರೇನು? ತಾಯಿಗೆ ಒಲವಾಗದು. ಕೊನೆಗೆ ನನಗೂ ಒಂದು ಬಗೆಯ ವೈರಾಗ್ಯವೋ ವೈರಸ್ಯವೋ ಉಂಟಾಯಿತೆನ್ನಬಹುದು. ಬೊಂಬಯಿಗೆ ಕೊನೆಯ ನಮಸ್ಕಾರ ಹೊಡೆದರಾಗಬಹುದು ಎಂದು ತೋರ ತೊಡಗಿತು. ಆದರೆ ನಾನೊಂದು ತೊಡಕನ್ನು ತಂದು ಕೊಂಡಿದ್ದೆ. ನಾನು ಕೆಲಸ ಮಾಡುತ್ತಿದ್ದುದು ಒಂದು ವ್ಯಾಪಾರಿ ಸಂಸ್ಥೆಯಲ್ಲಿ. ಧನಿಗಳು ದೊಡ್ಡ ಗುಜರಾಥಿ ಶ್ರೀಮಂತರು. ಬೊಂಬಯಿಯಲ್ಲಿ ಬಡಿದಾಟ ಹೆಚ್ಚಿದಂತೆ ಅವರ ಶರೀರದ ಆರೋಗ್ಯ ಕೆಡುತ್ತಾ ಬಂತು. ತಮ್ಮೂರಿಗೆ ಹೋಗಿ ಹವೆ ಬದ ಲಾಯಿಸದಿದ್ದರೆ ಬದುಕುವ ಹಾಗಿಲ್ಲ—ಎಂದು ತೋರಿತು. ಐವತ್ತು ರೂಪಾ ಯಿಯ ಹೆಚ್ಚಳವನ್ನು ಕೊಟ್ಟು "ಭಾಯಿ ...... ನೀನೇ ಎಲ್ಲವನ್ನು ನೋಡಿಕೊ... ಎರಡು ತಿಂಗಳಲ್ಲಿ ಹಿಂದೆ ಬರುತ್ತೇನೆ... ನಿನ್ನಲ್ಲಿ ನನಗೆ ಸಂಪೂರ್ಣ ವಿಶ್ವಾಸವಿದೆ" ಎಂದು ಭರವಸೆಕೊಟ್ಟರು. ಅವರಿಗೆ ನನ್ನಲ್ಲಿ ತುಂಬ ನಂಬಿಕೆಯಿತ್ತು. ಐವತ್ತು ರೂಪಾಯಿಯ ಅಧಿಕ ವೇತನಕ್ಕಾಗಿ ನಾನು ಪ್ರಾಣವನ್ನು ಬಲಿಕೊಡಲೂ ಸಿದ್ಧನೆಂಬುದರಲ್ಲಿ ಅವರಿಗೆ ಸಂದೇಹ ವಿರಲಿಲ್ಲ. ಅವರ ಪ್ರಾಣ ಮಾತ್ರ ನನ್ನದರಷ್ಟು ಅಗ್ಗವಲ್ಲ; ಅಷ್ಟೆ.. ತಿಂಗಳೆರಡು ಕಳೆದು ಅರ್ಧ ವರ್ಷವೇ ಆಯಿತು. ಅವರ ಆಗಮನ ವಾರ್ತೆ ಇಲ್ಲ. ಅವ ರಿಲ್ಲದ ಕಾಲದಲ್ಲಿ ಕೆಲಸ ಬಿಟ್ಟು ಹೋಗೋಣವೇ? ಅದು ಕಳ್ಳಾಟಿಕೆಯಾದೀ ತೆಂಬ ಮರ್ಯಾದೆಯ ಬುದ್ಧಿ ಬೇರೆ; ಬರಲೇ ಬೇಕೆಂಬ ತಾಯಿಯ ಒತ್ತಾಯ ಬೇರೆ. ಕೊನೆಗೆ ನಿರುಪಾಯನಾಗಿ "ಇನ್ನೊಂದು ತಿಂಗಳೊಳಗಾದರೂ ನೀವಿ ಲ್ಲಿಗೆ ಬರಬೇಕು; ನನಗೆ ಬಿಡುಕೊಡಬೇಕು. ಒಮ್ಮೆ ಊರಿಗೆ ಹೋಗಿ ತಾಯಿ ಯನ್ನು ನೋಡಿ ಬರಬೇಕು" ಎಂದು ಪತ್ರ ಬರೆದೆ. "ಬೇಗನೆ ಬರುತ್ತೇನೆ; ಅದು ವರೆಗೆ ಅಲ್ಲಿರು" ಎಂದು ಉತ್ತರ ಬಂತು.

ಈ ಬಾರಿ ತಾಯಿಯ ಒತ್ತಾಯದಲ್ಲಿ ಕೆರೆಕೋಡಿ ಅಬ್ದುಲ್ಲನ ತಾಯಿ ಪಾತುಮ್ಮ (ಇದು ಫತೀಮ ಎಂಬುದರ ಅಪಭ್ರಂಶ)ನ ಪ್ರಾರ್ಥನೆಯೂ ಸೇರಿಕೊಂಡಿತ್ತು. "ರಾಮಣ್ಣ ... ಕೆರೆಕೋಡಿ ಅಬ್ದುಲ್ಲನ ತಾಯಿ ಬಹಳ ಕಠಿನ ಸ್ಥಿತಿಯಲ್ಲಿ ಇದ್ದಾಳೆ. ಶರೀರದಲ್ಲಿ ರಕ್ತಮಾಂಸ ಎಂಬುದಿಲ್ಲ. ಇಡೀ ಶರೀರ ಒಂದು ದೊಡ್ಡ ತೊಗಲಿನ ಮೂಡೆಯ ಹಾಗಿದೆ. ತನ್ನ ನಿತ್ಯಕರ್ಮ ವನ್ನೂ ಮಾಡಲಾರದವಳಾಗಿದ್ದಾಳೆ. ಅಲ್ಲನು ಎಂದು ತನ್ನನ್ನು ಕರೆದೊಯ್ಯು

ವನೋ ಎಂದು ಹಾದಿನೋಡುತ್ತಿದ್ದಾಳೆ. ಅವಳೂ ನನ್ನಂತೆಯೇ ಹೆಣ್ಣಲ್ಲವೇ? ಅವಳೂ ನನ್ನಂತೆಯೆ ಹೊಟ್ಟೆಯಲ್ಲಿ ಹುಟ್ಟಿದ ಒಂದೇ ಒಂದು ಕೂಸಿನ ಮೇಲೆ ತನ್ನ ಆಸೆಗಳನ್ನೆಲ್ಲ ಹೇರಿ ದಿನಲೆಕ್ಕಮಾಡುತ್ತಿರುವ ಬಡವಿಧವೆಯಲ್ಲವೆ? ಅಲ್ಲಿ ಯಾರು ಯಾರನ್ನು ಬೇಕಾದರೂ ತಿವಿಯಲಿ. ನೀನು ಅವನನ್ನು ಹುಡುಕಿ ಕರೆದು ತರಲೇಬೇಕು. ಆತ ಹೋಗಿ ಇಂದಿಗೆ ಎಂಟು ವರ್ಷಗಳಾಗಿರ ಬಹುದು. ಒಮ್ಮೆಯಾದರೂ ಬಂದು ತಾಯಿಗೆ ಮುಖತೋರಿಸಿ ಹೋದು ದುಂಟೇ? ಏನಾದರೂ ಮಾಡಿ ಮುದುಕಿ ಪಾತುಮ್ಮನಿಗೆ ಕಳೆದುಹೋದ ಮಗನನ್ನು ತುಂದುಕೊಟ್ಟು ಪುಣ್ಯಸಂಪಾದಿಸು ಮಗ!—ಎಂದು ಪತ್ರದಲ್ಲಿತ್ತು. ಸಲಭ ಕಾರ್ಯವಲ್ಲ. ನಾನೊಬ್ಬ ನನ್ನ ತಾಯಿಗೆ ತನ್ನ ಮಗನನ್ನು ತಂದೊಪ್ಪಿಸಿದರೆ ಸಾಲದು. ಪಾತುಮ್ಮನಿಗೆ ಮಗನನ್ನು ತಂದುಕೊಡಬೇಕು! ನನ್ನ ತಾಯಿ 'ಪಾರ್ತಿ'. ಅವನ ತಾಯಿ ಪಾತುಮ್ಮ. ಬೊಂಬಯಿ ನಗರ ದಲ್ಲಿ ಈ ಎರಡು ಹೆಸರುಗಳೊಳಗೆ ಎಷ್ಟು ಅಂತರವೆಂಬುದು ಹಳ್ಳಿಯ ಹೆಂಗುಸಿಗೆ ಹೇಗೆ ತಿಳಿದೀತು? ಅಬ್ದುಲ್ಲನನ್ನು ಕರೆದುಕೊಂಡು ಹೋಗುವುದು ಹಾಗಿರಲಿ; ನನ್ನನ್ನು ನಾನೇ ಕರೆದುಕೊಂಡು ಹೋಗಬೇಕಾದರೆ ಈ ಜೀವ ವನ್ನು ಉಪ್ಪಿನಕಾಯಿ ಭರಣಿಯಲ್ಲಿ ತುಂಬಿ ಹೊಗೆಯಟ್ಟದಲ್ಲಿ ಅಡಗಿಸಿ ಕಾಯುತ್ತಿರಬೇಕು!

x x x x

ಅಬ್ದುಲ್ಲ! ಹೌದು, ಆತ ನನ್ನ ಬಾಲ್ಯದ ಸಂಗಾತಿ. ಪಾತುಮ್ಮ ಒಬ್ಬಳು ಬಡ ವಿಧವೆ. ಗಂಡನಿದ್ದಾಗ ಅವರಿಗೊಂದು ಚಿಕ್ಕ ಅಂಗಡಿಯಿತ್ತು. ನಮ್ಮ ಹಳ್ಳಿಯೆಂದರೆ ಹಳ್ಳಿಯ ರಾಜ. ಮನೆಗೆ ಎರಡು ಮೈಲು ದೂರದಿಂದ ಈಚೆಗೆ ರಸ್ತೆಯೇ ಇಲ್ಲ. ಎಲ್ಲ ಗದ್ದೆ ತೋಡು ಕಾಡು. ಹತ್ತಿರದ ಪೇಟೆಯ ರಸ್ತೆ ಗುಡ್ಡಬೆಟ್ಟಗಳ ಬೆನ್ನಮೇಲೆ ಹರೆದಾಡಿ ಸುತ್ತಿ ಡೊಂಕಿ ಏರಿ ಇಳಿದು ಮಾಗಣೆ ಶ್ಯಾನುಭಾಗರ ಮನೆಯ ಅಂಗಳದ ಅಂಚಿಗೆ ತಗಲುತ್ತದೆ. ಚಿಕ್ಕ ಬೋಳುಗುಡ್ಡದ ಮುಖದಿಂದಿಳಿದು ಬರುವ ಆ ರಸ್ತೆಯು ಕೆಂಪುತುದಿ, ದೂರ ನಿಂತು ತನ್ನೊಡೆಯನ ಕಾಲನ್ನು ನಕ್ಕುವ ನಾಯಿಯ ನೀಳನಾಲಗೆಯಂತೆ, ಗ್ರಾಮಕ್ಕೆ ಇಳಿಯುತ್ತದೆ. ಈ ರಸ್ತೆಯಲ್ಲಿಯೇ ನೂರು ಗಜ ಹಿಂದೆ ಪಾತು ಮ್ಮನ ಗಂಡನಿಗೆ ಬಿದಿರು ಮುಳಿಹುಲ್ಲಿನ ಹೊದಿಕೆಯ ಅಂಗಡಿಯೊಂದು ಇತ್ತು. ಈ ಚಿಕ್ಕ ಅಂಗಡಿಯಲ್ಲಿ ಅವನೊಬ್ಬ ದೊಡ್ಡ ಸಾವುಕಾರನಾದ. ನಸ್ಯ, ಬೀಡಿ, ಬಾಳೆಹಣ್ಣು, ಓಲೆಬೆಲ್ಲ, ಸಾಬೂನಿನ ತುಣುಕುಗಳನ್ನು ಮಾರಿ ಸ್ವಲ್ಪ ಕಾಸು

ಮಾಡಿದ್ದ. ಆತ ಸತ್ತು ಇಂದಿಗೆ ಇಪ್ಪತ್ತು ವರ್ಷವಾಯಿತೆಂದು ಹೇಳುತ್ತಾರೆ. ಆರು ವರ್ಷದ ಅಬ್ದುಲ್ಲನ ಲಾಲನೆ ಪಾಲನೆಗಳ ಭಾರ ಪಾತುಮ್ಮನ ಹೆಗಲ ಮೇಲೆ ಎರಗಿತು. ಆದರೆ ಅಬ್ದುಲ್ಲನಂಥವರನ್ನು ಸಾಕುವ ಕೆಲಸ ಅಷ್ಟೇನೂ ದೊಡ್ಡದಲ್ಲ. ದಿನಕ್ಕೆ ಮೂರು ಬಾರಿ ಗಂಜಿ. ಉಡುವುದಕ್ಕೊಂದು ಲುಂಗಿ. ಮೈಗೊಂದು ಗಂಜಿಪ್ರಾಕು (ಬನಿಯನ್). ಮನೆಯಲ್ಲಿ ತಂಟೆ ತಪ್ಪಿಸುವುದೊಂದೆ ಉಳಿದ ಪ್ರಶ್ನೆ. ಶಾಲೆಗೆ ಕಳುಹಿಸಿದರಾಯಿತಲ್ಲವೆ? ಹಗಲು ಹೊತ್ತು ಮಾಸ್ತರರ ಬೆತ್ತ ಕಾಯುತ್ತದೆ; ರಾತ್ರಿ ನಿದ್ರೆ ಕಾಯುತ್ತದೆ. ದಿನ ಹೋಗುವುದು; ವರ್ಷವಾಗುವುದು. ಮೈ ಬೆಳೆಯುವುದು. ರೂಪಾಯಿ ಆಣೆ ಪೈಗಳ ಲೆಕ್ಕ ಬರುವಾಗ ತಂದೆಯ ಕಸುಬನ್ನು ಕೈಕೊಂಡರಾಯಿತು. ಪಾತುಮ್ಮನಿಗೆ ಮಗನ ಭವಿಷ್ಯದ ವಿಷಯದಲ್ಲಿದ್ದ ಮಹಾಕಾಂಕ್ಷೆ ಇಷ್ಟೆ! ತಾನು ಸಾಯುವ ಕಾಲಕ್ಕೆ ಮಗನ ಕಣ್ಣಮುಂದೆಯೇ ಸಾಯಬೇಕೆಂಬುದು, ತಾಯಿಯಾದ ತಂದೆಯಾದ, ಪ್ರತಿಯೊಂದು ವ್ಯಕ್ತಿಯ ಆಸೆಯಷ್ಟೆ. ಅದನ್ನು ಬೇರೆ ಹೇಳಬೇಕಾದುದಿಲ್ಲ.

ನನಗೆ ಅಬ್ದುಲ್ಲನ ಪರಿಚಯ ಮಾಡಿಕೊಟ್ಟುದು ನನ್ನ ಗ್ರಾಮದ ಶಾಲೆ. ಅಬ್ದುಲ್ಲ ಶತದಡ್ಡ. ಆದುದರಿಂದ ಉಪಾಧ್ಯಾಯರ ಬೆತ್ತಕ್ಕೆ ಒಳ್ಳೆಯ ಸವಿತುತ್ತಾಗಿದ್ದ. ನಾನು ಓದುವುದರಲ್ಲಿ ಚುರುಕಾಗಿದ್ದರೂ ತಂಟೆ ಮಾಡುವುದರಲ್ಲಿ ಅಗ್ರಗಣ್ಯ. ತಂಟೆ ಮಾಡದ ದಡ್ಡನಿಗೂ ಕಲಿಯುವ ತುಂಟನಿಗೂ ಒಂದೇ ತೆರ. ನಾದ ಸಂಭಾವನೆ. ಇಡೀ ಶಾಲೆಯಲ್ಲಿ ನಮ್ಮಿಬ್ಬರಷ್ಟು ಮೈ ಹದ ಮಾಡಿಸಿಕೊಂಡವರು ಬೇರಾರೂ ಇರಲಿಲ್ಲ. ಬೆತ್ತಗಳಿಗೂ ನಮಗೂ ರಕ್ತ ಸಂಬಂಧವೇ ಇದ್ದಿರಬೇಕು. ಈ ಕಾರಣದಿಂದ ನನಗೆ ಅಬ್ದುಲ್ಲನಲ್ಲಿಯೂ ಅಬ್ದುಲ್ಲನಿಗೆ ನನ್ನಲ್ಲಿಯೂ ಸಹಾನುಭೂತಿ ಉಂಟಾಯಿತು. ಪೆಟ್ಟುದೊರೆಯದ ದಿನಗಳೇ ಇರಲಿಲ್ಲ. ಕೊನೆಗೆ ನಿರಾಶರಾದೆವು. ಮಾಸ್ತರರ ಬೆತ್ತದ ಆಟವನ್ನು ನಿಲ್ಲಿಸಲೇ ಬೇಕೆಂದು ತೋರಿತು. ಯಾವ ಬಗೆಯಿಂದಲಾದರೂ ಸೇಡುತೀರಿಸಬೇಕೆಂದು ತೋರಿತು. ಈ ಶಾಲೆಗೆ ಬಂದು ಈ ಮಾಸ್ತರರಿಂದ ಕಲಿಯುವುದು ಪೆಟ್ಟು ತಿನ್ನುವ ಪಾಠವನ್ನಷ್ಟೆ! ಇದನ್ನು ಬೇರೆಲ್ಲಿಯಾದರೂ ಕಲಿತುಕೊಳ್ಳೋಣ . . . ಒಮ್ಮೆಗೆ ಮಾಸ್ತರರಿಗೆ ಬಿಸಿಹುಟ್ಟಿಸೋಣ . . . ಎಂದು ಯೋಚಿಸುತ್ತಿದ್ದೆವು. ಅದು ಮಧ್ಯಾಹ್ನದ ಹೊತ್ತು. ಮಾಸ್ತರರು ಪಟೇಲರ ಮನೆಗೆ ಹೋಗಿ ಊಟ ಮಾಡಿ ಬರುತ್ತಾರೆ. ಆ ದಿನ ಪಟೇಲರ ಮನೆಯಲ್ಲಿ ಒಂದು ಔತಣವಿತ್ತು. ತಿಂದ ಭಾರವನ್ನು ಹೊರುವ ಆಯಾಸದಿಂದ ಆಕಳಿಸಿಕೊಂಡೇ ಬಂದಾರು

ಎಂಬುದೂ ನಮಗೆ ಗೊತ್ತು. ಮಕ್ಕಳಲ್ಲಿ ಮುಕ್ಕಾಲು ಪಾಲು ಜನ ತಂತಮ್ಮ ಮನೆಗಳಿಗೆ ಹೋಗಿದ್ದರು. ಬುತ್ತಿ ತರುತ್ತಿದ್ದವರಲ್ಲಿ ನಾನೊಬ್ಬ. ಅಬ್ದುಲ ನೊಬ್ಬ. ಬುತ್ತಿಯನ್ನು ತಿಂದು ಮುಗಿಸಿ ಶಾಲೆಯ ಹಿಂದಿನ ಪೊದರುಗಳ ನಡುವೆ ತಿರುಗಾಡುತ್ತಿದ್ದೆವು. "ಏನು ಅಬ್ದುಲ್ಲ . . ನಮ್ಮ ಮಾಸ್ತರರು ನಮಗಿಷ್ಟು ಬುದ್ಧಿ ಕಲಿಸುತ್ತಾರಲ್ಲ; ನಾವು ಅವರಿಗೂ ಒಂದಿಷ್ಟು ಕಲಿಸಿ ಬಿಡೋಣವೇ?" ಎಂದು ನಗುತ್ತಾ ಕೇಳಿದೆ. "ಓಹೋ . . ಆಗಬಹುದು" ಎಂದ ಅಬ್ದುಲ್ಲ. ಆಗ ಅಲ್ಲೆ ಒಂದು ಚೂರಿ ಮುಳ್ಳಿನ ಪೊದರು ಕಾಣಿಸಿತು. ಹರಿತವಾದ ಆ ಮುಳ್ಳುಗಳ ಮೊನೆಯಲ್ಲಿಯೇ ಮಾಸ್ತರರಿಗೆ ಕಲಿಸಬೇಕಾದ ಬುದ್ಧಿಯೂ ಕಾಣಿಸಿತು. "ನನ್ನ ಬೆನ್ನು ರಾಗಿ ಬೀಸುವ ಕಲ್ಲು" ಎಂದೆನಾನು. "ನನ್ನ ಬೆನ್ನು ಸಮಗಾರನ ಚರ್ಮ" ಎಂದ ಅಬ್ದುಲ್ಲ. "ಈ ಚೂರಿಮುಳ್ಳು ಬುದ್ಧಿ ಕಲಿಸುತ್ತದೆ" ಎಂದು ನಾನು ಅಭಯಕೊಟ್ಟೆ. ಬೊಗಸೆ ತುಂಬ ಮುಳ್ಳನ್ನು ಸಂಗ್ರಹಿಸಿದೆವು. ನಮ್ಮ ಉಪಾಧ್ಯಾಯರ ಕುರ್ಚಿ ಬೆತ್ತದ ಹೆಣೆ ತದ್ದು. ಅದರಲ್ಲಿ ಸಜೀವವಾದ ಚೂರಿಮುಳ್ಳುಗಳೆಷ್ಟೊ ಮನೆ ಮಾಡಿದ್ದುವು. ಈ ತಗಣೆಗಳು ಅವರ ಬೆತ್ತಕ್ಕೂ ಹೆದರುತ್ತಿರಲಿಲ್ಲ. ಮಕ್ಕಳಿಗೆ ಅವರಲ್ಲಿದ್ದ ಹೆದರಿಕೆ ಈ ತಗಣೆಗಳಿಗೆ ಇರಲಿಲ್ಲ. ಇವುಗಳ ಹಾವಳಿ ತಪ್ಪಿಸುವುದಕ್ಕಾಗಿ ಮಾಸ್ತರರು ಕುರ್ಚಿಯ ಮೇಲೆ ಎರಡು ಮಡಿಕೆ ಮಾಡಿದ ಹುಲ್ಲುಚಾಪೆಯನ್ನು ಬೆನ್ನಿನಾಭಾಗಕ್ಕೂ ಆಸನಕ್ಕೂ ಹಾಸುತ್ತಿದ್ದರು. ನಾವು ಆ ಚೂರಿಮುಳ್ಳು ಗಳನ್ನು ತಂದು ಚಾಪೆಯ ಮಡಿಕೆಯೊಳಗೆ ಅಂಟಿಸಿ ಇಟ್ಟೆವು. ಪಟೇಲರ ಮನೆ ಯಲ್ಲಿ ಊಟತೀರಿಸಿಕೊಂಡು, ಕೈ, ಕಾಲು, ಹೊಟ್ಟೆ—ಯಾವುದೂ ತನ್ನದಲ್ಲ ಎಂಬ ಆಯಾಸದಿಂದ ಬುಸ್ಸೆಂದು ನಿಟ್ಟುಸಿರು ಬಿಡುತ್ತಾ ಮಾಸ್ತರರು ಬಂದು ದೊಪ್ಪನೆ ಕುರ್ಚಿಯ ಮೇಲೆ ಅಂಡಿಸಿದುದೇ ತಡ.

ಅಯ್ಯೋ! ಎಂದು ಹುಯಿಲಿಡುತ್ತಾ ಒಂದು ನಿಮಿಷ ಭೂತದ ಅಣಿ ಕಟ್ಟಿದ ನಲಿಕೆಯವನಂತೆ ಗೋಳಿಟ್ಟರು! ಮಕ್ಕಳೆಲ್ಲ ತಬ್ಬಿಬ್ಬಾಗಿ ನೋಡುತ್ತಿ ದ್ದರು. ನಾವಿಬ್ಬರೆ ಮನಸ್ಸಿನ ಒಳಗೇ ನಗುತ್ತಿದ್ದೆವು. ಮನಸ್ಸಿನ ನಗು ತುಟಿ ಯಲ್ಲಿ ಕಾಣಿಸಿತೋ ಏನೋ . . ಅಥವಾ ಇಂತಹ ತಂಟೆ ತಕರಾರುಗಳನ್ನು ಮಾಡುವುದಕ್ಕೆ ನಾನೊಬ್ಬನೇ ಸಮರ್ಥನೆಂಬ ಕಾರಣದಿಂದಲೋ ಏನೊ . . ಉಪಾಧ್ಯಾಯರು ಬೆತ್ತವನ್ನು ಬಲವಾಗಿ ಬೀಸಿ ನನ್ನ ಬೆನ್ನಿಗೆ, ಕಾಲಿಗೆ, ಕೈಗೆ . . ಎಲ್ಲ ಅವಯವಗಳಿಗೆ, ಹೊಡೆದರು. ಆಗ ಅಬ್ದುಲ್ಲ "ಅಯ್ಯೋ!" ಎಂದು ಅರಚಿದ. ಹೀಗೆ ಅರಚಿದ ಕಾರಣದಿಂದಲೇ ಅವನ ಅಪರಾಧವೂ ರುಜುವಾಯಿತು.

ಬೇರೆ ಮಕ್ಕಳೆಲ್ಲ ಮೌನವಾಗಿ ನೋಡುತ್ತಿದ್ದಾಗ ಅಬ್ದುಲ್ಲನೊಬ್ಬನೇ ಅರಚಿದುದೇಕೆ? ನನ್ನ ಈ ಒಳಸಂಚಿನಲ್ಲಿ ಅವನೂ ಸೇರಿದ್ದಾನೆನ್ನುವುದಕ್ಕೆ ಬೇರೆ ಸಾಕ್ಷಿ ಬೇಕೆ? ನಮ್ಮಿಬ್ಬರನ್ನೂ ಶಾಲೆಯ ಮುಂದೆ ನಿಲ್ಲಿಸಿ ಐವತ್ತೈವತ್ತು ಚಡಿಕೊಟ್ಟರು. ಶಾಯಿಕುಪ್ಪಿಗೆ ಬೆರಳನ್ನು ಮುಳುಗಿಸಿ ಇಬ್ಬರಿಗೂ ಕಪ್ಪು ಮೀಸೆಗಳನ್ನೆಳೆದರು. ಮುಖಕ್ಕೆ ಮೂರು ಮೂರು ನಾಮ ಹಾಕಿದರು. ಶಾಲೆಯಿಂದ ಹೊರಗೆ ದಬ್ಬಿ ಬಿಟ್ಟರು.

ಶಾಲೆಯ ಹೊರಗೆ ಅಳುತ್ತಾ ಹೋಗುತ್ತಿದ್ದ ನಮ್ಮಿಬ್ಬರ ಮೈ ಕೆಂಡದಲ್ಲಿ ಹಾಕಿದ ಬದನೆಕಾಯಿಗಳಂತೆ ಉರಿಯುತ್ತಿತ್ತು. ಸ್ಲೇಟು ಪುಸ್ತಕಗಳನ್ನು ಹೆಗಲ ಮೇಲಿಟ್ಟುಕೊಂಡು ಮನೆಯ ದಾರಿಯಲ್ಲಿ ನೂರು ಗಜ ನಡೆಯುತ್ತಿದ್ದಾಗ ನನ್ನ ಮನಸ್ಸು ಅವನ ಕಡೆಗೂ ಅವನ ಮನಸ್ಸು ನನ್ನ ಕಡೆಗೂ ಹಾರಿತು. ಕರ್ತವ್ಯ ಮಾಡಿದುದಕ್ಕೆ ಶಿಕ್ಷೆಯನ್ನನುಭವಿಸಬೇಕಾಗಿ ಬಂದ ನಿರಪರಾಧಿಗಳಂತೆ ನಾವಿಬ್ಬರೂ ಪರಸ್ಪರ ಸಹಾನುಭೂತಿಯನ್ನು ತೋರಿಸುತ್ತಿದ್ದೆವು. ಮನೆಗೆ ಹೋಗುವುದಕ್ಕೆ ಅವಕಾಶವಿರಲಿಲ್ಲ. ಶಾಲೆ ಮುಗಿಯುವ ಮುಂಚೆ ಬಂದುದೇಕೆ? ಎಂದು ತಾಯಂದಿರು ಕೇಳಿದರೆ ನಾವು ಕೊಡಬೇಕಾಗಿದ್ದ ಉತ್ತರವೇನು? ಇದೇ ವೇಷದಲ್ಲಿ ಬಲುದೂರ ಹೋಗುವ ಹಾಗಿರಲಿಲ್ಲ. ಈ ಮೀಸೆ ನಾಮಗಳನ್ನು ಕಂಡರೆ ದಾರಿಹೋಕರು ಏನೆಂದಾರು? ಆಗ ಅಬ್ದುಲ್ಲನಿಗೆ ಒಂದು ಯೋಜನೆ ಹೊಳೆಯಿತು. "ರಾಮಣ್ಣ! ನಿನಗೆ ಈಜು ಬರುತ್ತದೊ?" ಎಂದು ಅಬ್ದುಲ್ಲ ಕೇಳಿದ. "ಬರುವುದಿಲ್ಲ"—ಎಂದೆ.

"ಹಾಗಾದರೆ ಈ ದಿನ ಕಲಿಯುತ್ತೀಯೋ?" ಎಂದು ಅವನ ಪ್ರಶ್ನೆ. "ಓಹೊ! ಆಗಬಹುದು!" ಎಂದು ನನ್ನ ಉತ್ತರ. ನಮ್ಮ ಮುಂದೆ ಅರೆ ಮೈಲು ದೂರದಲ್ಲಿಯೇ ಒಂದು ತೊರೆಯಿತ್ತು. ಮಳೆಗಾಲವನ್ನು ಬಿಟ್ಟು ಬೇರೆ ದಿನಗಳಲ್ಲಿ ಈಜಾಡುವುದಕ್ಕೆ ಬೇಕಾದ ನಿಂತ ನೀರಿನ ಕೆರೆಯಂತೆ ಅದು ಆಕರ್ಷಕವಾಗಿತ್ತು. ಅಬ್ದುಲ್ಲ ಮೀನು ಹಿಡಿಯುವುದರಲ್ಲಿ ಗಟ್ಟಿಗ. ಹಿಡಿದ ಮೀನುಗಳಿಂದಲೇ ಈಜಾಟ ಕಲಿತಿದ್ದ. ನಾನು ತಾಯಿಯ ಮೋಹದ ಮಗು. ನೀರನ್ನು ಕಂಡರೆ ಹೆದರಬೇಕೆಂಬುದೇ ನಾನು ಕಲಿತ ಪಾಠ. ಅಂದು ನನಗೆ ಈಜುವ ವಿದ್ಯೆಯ ಆರಂಭವಾಯಿತು. ಮುಹೂರ್ತ ಮಾಡಿಸಿದ ಗುರು ಅಬ್ದುಲ್ಲ.

ನಾನು ಅಬ್ದುಲ್ಲನೂ ಆ ಶಾಲೆಯಲ್ಲಿ ಹೆಚ್ಚುಕಾಲ ಒಡನಾಡಿರಲಿಲ್ಲ. "ಇಂಗ್ಲೀಸು ಬರವಿ"ಗಾಗಿ ನನ್ನನ್ನು ಪುತ್ತೂರಿಗೆ ಕಳುಹಿಸಿದರು. ಅಬ್ದುಲ್ಲ ಏನ

ಮಾಡುತ್ತಿದ್ದನು—ಎಂದು ನಾನರಿಯೆ. ಆದರೆ ಮಾಸ್ತರರ ಬೆತ್ತದ ದ್ವಾರಾ ನಮ್ಮಲ್ಲಿ ಉಂಟಾದ ಪ್ರೇಮವು ಸರ್ವಥಾ ಕುಂದಲಿಲ್ಲ. ನಾನು ರಜೆಯಲ್ಲಿ ಮನೆಗೆ ಬಂದಾಗ ಒಂದು ದಿನವಾದರೂ ಅಬ್ದುಲ್ಲನನ್ನು ಕಾಣದೆ ಇಲ್ಲ. ಇಬ್ಬರೂ ಒಂದಾಗಿ ಕಾಡುಗುಡ್ಡಗಳಲ್ಲಿ ಅಲೆದಾಡುವುದು; ಮರಹತ್ತುವುದು; ದರೆಹಾರುವುದು; ಕಲ್ಲಾಟವಾಡುವುದು; ಸರಿಮುಗುಳಿ ಹಿಡಿಯುವುದು; ಬಾಳೆನಾರಿನ ಚೆಂಡನ್ನು ಒದೆಯುವುದು. ಇದೆಲ್ಲ ನಿತ್ಯಾಭ್ಯಾಸ. ಒಮ್ಮೊಮ್ಮೆ ಅಬ್ದುಲ್ಲನ ಮನೆಗೆ ನಾನೂ ನನ್ನ ಮನೆಗೆ ಅಬ್ದುಲ್ಲನೂ ಹೋಗುವುದೂ ಬರುವುದೂ ಇತ್ತು. ಪಾತುಮ್ಮ ನನಗೆ ಅವಲಕ್ಕಿ ತಾಳೆಬೆಲ್ಲಗಳನ್ನು ಕೊಟ್ಟರೆ ನನ್ನಮ್ಮ ಅಬ್ದುಲ್ಲನಿಗೆ ಕಾಫಿ ದೋಸೆ ಕೊಡದೆ ಇರುತ್ತಿರಲಿಲ್ಲ. ಹೀಗೆ ವರ್ಷಗಳು ಸಂದುವು. ಪುತ್ತೂರಿನಲ್ಲಿ ಕಲಿಯಬಹುದಾದುದನ್ನು ಕಲಿತುದಾಯಿತು. ಕೆಲಸಕ್ಕಾಗಿ ಹೊರಡುವ ಕಾಲ ಬಂತು. ಈ ಸುದ್ದಿಯನ್ನು ಕೇಳಿ ಅಬ್ದುಲ್ಲ ನನ್ನ ಬಳಿಗೆ ಓಡಿಬಂದು "ರಾಮಣ್ಣ! ಒಮ್ಮೆ ನಮ್ಮ ಮನೆಗೆ ಬರಬೇಕಂತೆ!" ಎಂದ. ಆ ದಿನ ಸಂಜೆ ಅಲ್ಲಿಗೆ ಹೋದೆ. ಪಾತುಮ್ಮ ನನಗೆ ದಿವ್ಯವಾದ ಆರೋಗಣೆಗೆ ಅಟ್ಟಣೆ ಮಾಡಿದ್ದಳು. ಎಳನೀರು; ಸಕ್ಕರೆ; ಬಾಳೆಹಣ್ಣು; ಒಂದು ಪಿಂಗಾಣಿ ಬಟ್ಟಲಲ್ಲಿ ತುಂಬ ಹುರಿಗಡಲೆ! ನನಗೆ ಕೊಟ್ಟುದರಲ್ಲಿ ಒಂದಂಶ ಅಬ್ದುಲ್ಲನಿಗೂ ಸಿಕ್ಕಿತು. ಇಬ್ಬರೂ ತಿಂದು ತೇಗಿದೆವು. ತಿನ್ನುತ್ತಿದ್ದಾಗ ಪಾತುಮ್ಮ ಬಳಿಯಲ್ಲಿಯೇ ನಿಂತು ನಾನು ತಿನ್ನುತ್ತೇನೋ ಇಲ್ಲವೋ? ಉಪಚಾರಕ್ಕಾಗಿ ತಿನ್ನುತ್ತೇನೋ ಪ್ರೀತಿಯಿಂದ ತಿನ್ನುತ್ತೇನೋ ಎಂಬುದನ್ನು ಎವೆಯಿಕ್ಕದೆ ನೋಡುತ್ತಲೇ ಇದ್ದಳು. ನಾನು ತಿಂದು ಮುಗಿಸುವಾಗ ಅವಳ ಕಣ್ಣುಗಳು ಒದ್ದೆಯಾದುದನ್ನು ಕಂಡೆ. ನನ್ನ ಹೃದಯವೂ ಒದ್ದೆಯಾಯಿತು. ಅವಳು ಯಾರೋ ನಾನು ಯಾರೋ! ಹೀಗಿದ್ದರೂ ಪಡೆದ ತಾಯಿಗಿಂತ ಹೆಚ್ಚಾದ ಮಮತಾಪೂರ್ಣ ದೃಷ್ಟಿಯಿಂದ ನನ್ನನ್ನು ನೋಡುತ್ತಾಳಲ್ಲ! ಯಾವ ಪೂರ್ವಜನ್ಮ ಸಂಬಂಧವೋ ಇದು! ಎಂದು ಮನಸ್ಸಿಗೆ ತೋರಿತು. ಹೋಗುತ್ತೇನೆ ಪಾತುಮ್ಮ! ಎನ್ನುವಾಗ ನನ್ನ ಧ್ವನಿ ನಡುಗಿತು. ಹೊರಟು ಬರುವಾಗ ಪಾತುಮ್ಮ ಸಮೀಪಕ್ಕೆ ಬಂದು—"ನಿನ್ನ ತಮ್ಮ ಅಬ್ದುಲ್ಲನನ್ನು ಮರೆಯಬೇಡ ರಾಮಣ್ಣ. ನನಗೆ ಯಾರೂ ಗತಿಯಿಲ್ಲ. ಅಲ್ಲಿ ಅಲ್ಲನೊಬ್ಬ . . . . ಇಲ್ಲಿ ಇವನೊಬ್ಬ . . . . ನೀನು ನಾಲ್ಕು ಓದು ಕಲಿತವ. ಇವನು ಹೋದಲ್ಲಿ ಅದಿಲ್ಲ. ಬೊಂಬಾಯಿಗೆ ಹೋಗಿ ದೊಡ್ಡ ಚಾಕರಿನೋಡು ಮಗ . . . . ನೀನು ದೊಡ್ಡವನಾದಾಗ ಈ ಬಡ ತಮ್ಮನನ್ನು

ಮರೆಯಬೇಡ . . . . ಪಾತುಮ್ಮನಿಗೆ ಕಾಡು ಹತ್ತಿರವಾಯಿತು; ಊರು ದೂರವಾಯಿತು. ಈ ಹಾಳುಬುದ್ಧಿಯ ಪೋರನಿಗೆ ಏನಾದರೂ ಕೆಲಸ ಮಾಡಿಸಿಕೊಟ್ಟರೆ ನಾಲ್ಕು ವರ್ಷ ಹೆಚ್ಚು ಬದುಕಿಯೇನು. ಮತ್ತೇನೂ ಇಲ್ಲ ಇವನಿಗೆ . . . . ಕೈಕಾಲುಗಳಾದರೂ ಗಟ್ಟಿಯಾಗಿವೆ . . . . " ಎಂದು ನಡು ಗುವ ಧ್ವನಿಯಲ್ಲಿ ಆಡಿದಳು.

"ಆಗಲಿ ಪಾತುಮ್ಮ! ಅಲ್ಲಿಗೆ ಹೋದಮೇಲೆ ತಿಳಿಸುತ್ತೇನೆ" ಎಂದೆ.

ನನ್ನನ್ನು ಕಳುಹಿಕೊಡುವುದಕ್ಕಾಗಿ ಅಬ್ದುಲ್ಲ ನಮ್ಮ ಮನೆಯ ಮುಂದಿನ ಸುಗ್ಗಿ ಗದ್ದೆಯ ಅಂಚಿನ ವರೆಗೆ ಬಂದ. "ಹೋಗುತ್ತೇನೆ ರಾಮಣ್ಣ . . . . ನನ್ನನ್ನು ಮರೆಯುವುದಿಲ್ಲವಷ್ಟೆ" ಎನ್ನುತ್ತ ಕಣ್ಣೀರು ಸುರಿಸಿದ. "ಹೇಗೆ ಮರೆತೇನು ಅಬ್ದುಲ್ಲ!" ಎಂದಾಗ ನನ್ನ ಮುಖವೂ ಕೆಂಪಾಗಿದ್ದಿರಬೇಕು.

ಬಾಲ್ಯದಲ್ಲಿ ಕುಡಿಬಿಟ್ಟ ಸ್ನೇಹ ಒಣಗಿಹೋಗುವುದುಂಟೇ? ನನ್ನಂತೆ—ಅಬ್ದುಲ್ಲನಂತೆ, ಹೊರಗಿನ ಭೇದಗಳನ್ನು ಮರೆತು ಸುಖದುಃಖಗಳನ್ನು ಹಂಚಿಕೊಂಡು ಒಡನಾಡಿದವರು ಒಬ್ಬರನ್ನೊಬ್ಬರು ಮರೆಯುವುದುಂಟೇ? ನನ್ನ ಪ್ರಯತ್ನದಿಂದ ಅವನಿಗೊಂದು ಕೆಲಸ ಸಿಕ್ಕಿತು. ಅದರಲ್ಲಿ ಅವನು ತೃಪ್ತಿ ಹೊಂದದೆ 'ಕಲಾಸಿ' ಯಾದನಂತೆ. ಏನು ಕಲಾಸಿಯೋ ಎಲ್ಲಿ ಸೇರಿದನೊ ನಾನರಿಯೆ. ನಾನು ಉಪಕಾರಕ್ಕೆಂದು ಮಾಡಿದ ಪ್ರಯತ್ನದಿಂದ ಪಾತುಮ್ಮನಿಗೆ ಅಪಕಾರವಾಯಿತು—ಎಂಬುದು ನನಗೆ ಮತ್ತೆ ತಿಳಿಯಿತು. ಅವನು ಕಲಾಸಿಯಾದ ಮೇಲೆ ನನ್ನ ಮುಖ ನೋಡಲಿಲ್ಲ. ಬೊಂಬಾಯಿಗೆ ಹೋದ ಮೇಲೆ ಮನೆಯಕಡೆ ಸುಳಿದು ಮೆಟ್ಟಲಿಲ್ಲ. ಪಾತುಮ್ಮ ಕರಗಿದಳು; ಸೊರಗಿದಳು. ಮೊದಲೇ ಕ್ಷೀಣವಾಗಿದ್ದವಳು ಬಿಸಿಲಲ್ಲಿ ಬಿದ್ದ ಕಾಷ್ಠದಂತೆ ಒಣಗಿದಳು. ನಾನು ಊರಿಗೆ ಹೋದಾಗಲೆಲ್ಲ, ನನ್ನ ಸಮಯವನ್ನು ನಿರೀಕ್ಷಿಸಿ ನನ್ನ ಬಳಿಗೆ ಬಂದು ತನ್ನ ಹಂಬಲನ್ನೇ ಹೇಳುತ್ತಿದ್ದಳು. "ಅಬ್ದುಲ್ಲನನ್ನು ಕಂಡೆಯೋ ಮಗು . . . . ನಿನ್ನ ತಮ್ಮನನ್ನು ಒಮ್ಮೆ ಕರೆದುಕೊಂಡು ಬಾ ರಾಮಣ್ಣ. ಈ ಲೋಕದಲ್ಲಿ ಬೇರೇನೂ ಆಸೆಯಿಲ್ಲ. ಈ ಬಡಹೆಣ್ಣು ಏಕೆ ಬದುಕಬೇಕು? ನೀನು ವರ್ಷಗಟ್ಟಳೆ ಮುಖತೋರಿಸದಿದ್ದರೆ ಈ ಅಕ್ಕ (ನನ್ನ ತಾಯಿ) ಏನಾದಾಳು ಎಣಿಸಬಾರದೇ ರಾಮು! ನಿನ್ನ ತಾಯಿ ಬೇರೆ–ನಾನು ಬೇರೆಯೆ?" ಎಂದೆಲ್ಲ ಹೇಳುತ್ತಿದ್ದಳು. ಮಾತು ಸತ್ಯ; ಆದರೆ ಕೈತಪ್ಪಿಸಿ ಹೋದವನನ್ನು ತಂದುಕೊಡುವ ಶಕ್ತಿ ನನ್ನದೇ?

x x x x

ತಾಯಿಯ ಪತ್ರಬಂದ ಮೇಲೆ ಹಲವಾರು ಬಾರಿ ಕೆರೆಕೋಡಿ ಅಬ್ದುಲ್ಲನ ಪತ್ತೆಹಚ್ಚಲು ಪೇಚಾಡಿದೆ. ಪ್ರಯೋಜನವಾಗಲಿಲ್ಲ. ನಮ್ಮೂರವರಲ್ಲಿ ಒಬ್ಬೊಬ್ಬರು ಒಂದೊಂದು ಬಗೆಯಾಗಿ ಹೇಳುತ್ತಿದ್ದರು. ಅದನ್ನೆಲ್ಲ ಕೇಳಿ ಮಾಡುವುದಾದರೂ ಏನು? ನನ್ನನ್ನು ಆತ ಕಾಣದೆ ಆರು ವರ್ಷಗಳಾದರೂ ಆಗಿರಬೇಕು. ಈ ಅವಧಿಯಲ್ಲಿ ಅವನೇನಾಗಿದ್ದಾನೋ? ಶರೀರದಲ್ಲಿ ಹೇಗೆ ಬೆಳೆದಿದ್ದಾನೋ? ಮನಸ್ಸಿನಲ್ಲಿ ಹೇಗೆ ಬದಲಾವಣೆ ಹೊಂದಿದ್ದಾನೋ? ಈಗ ಆತನನ್ನು ಕಂಡರೆ ಗುರುತಿಸುವುದಾದರೂ ಸಾಧ್ಯವೇ? ಈಗ ನನಗೆ ಅಬ್ದುಲ್ಲನೆಂದರೆ ಭಾವನೆಯ ಒಂದು ಚಿತ್ರ ಮಾತ್ರ! ಎತ್ತರವಾದ ನಿಲವು; ಬಿಳಿ ಬಣ್ಣ; ತುಂಬಿದ ಒಡಲು; ಚಿಗುರು ಮೀಸೆ; "ಎಲ್ಲಿಗೂ ಹೋದೇನು; ಏನೂ ಮಾಡಿಯೇನು; ಕಲ್ಲು ತಿಂದಾದರೂ ಬದುಕಿಯೇನು" ಎನ್ನುವ ಎದೆಗಾರಿಕೆಯನ್ನು ಹೊಮ್ಮಿಸುವ ನೋಟದ ತುಳುಕು! ಯಾರು ನನಗೆ ತಮ್ಮನಾಗಿದ್ದನೋ ಅವನಿಂದು ಬರಿಯ ಅಬ್ದುಲ್ಲ!

ಬೊಂಬಾಯಿಯ ಜನಸಮುದ್ರದಲ್ಲಿ ಈ ಹನಿಯನ್ನು ಹುಡುಕುವುದು! ಯಾರಿಗೆ ಬೇಕು ಈ ಅಬ್ದುಲ್ಲ? ಹಕ್ಕಿಗೂಡುಗಳಂತೆ ಒತ್ತೊತ್ತಾಗಿರುವ ಮನೆಗಳಲ್ಲಿ ಒಂದು ಗೋಡೆಯಿಂದ ಆಚೆಗೆ ಯಾರು? ಈಚೆಗೆ ಯಾರು? ಎಂದು ಗೊತ್ತಿರುವುದೇ ಕಡಿಮೆ. ಈಗ ಪರಿಚಯ ಯಾರಿಗೂ ಬೇಕಾಗಿಲ್ಲ. ಬೇಕಾಗಿದ್ದರೆ ತಿವಿಯುವುದಕ್ಕೆ! ಹೊಡೆಯುವುದಕ್ಕೆ! ಕಿವಿಚುಚ್ಚಿಸಿಕೊಂಡಾತ ಚುಚ್ಚಿಸದವನನ್ನು ಹೊಡೆಯುತ್ತಾನೆ. ತಲೆ ಬೋಳಿಸಿದಾತ ಬೋಳಿಸದವನನ್ನು ಇರಿಯುತ್ತಾನೆ. ದೇವರು, ಧರ್ಮ, ನೀತಿ, ಸಂಸ್ಕೃತಿ ಯಾವುದೂ ಬೇಡ. ಎಲ್ಲವನ್ನೂ ಮರೆತಿದ್ದೇವೆ. ಕ್ರೂರಜಂತುಗಳಾಗಿರಲು ಒಪ್ಪಿದ್ದೇವೆ. ಅಲ್ಲ; ಸ್ಪರ್ಧಿಸುತ್ತಿದ್ದೇವೆ. ಅಬ್ದುಲ್ಲನೂ ನಾನೂ ನಮ್ಮ ಹಳ್ಳಿ ಮೂಲೆಯಲ್ಲಿಯೇ ಇರುತ್ತಿದ್ದರೆ ಅಣ್ಣ ತಮ್ಮ ಎಂದು ಪ್ರೇಮದ ಸಡಗರದಲ್ಲಿ ಕುಣಿಯಬಹುದಾಗಿತ್ತು. ಈಗಿನ ಈ ಬೊಂಬಾಯಿ ನಗರದಲ್ಲಿ ನಾವು ಪರಸ್ಪರವಾಗಿ ಕೊಳ್ಳೆ ಹೊಡೆಯುವ ಭಿನ್ನಪಂಥಗಳಿಗೆ ಸೇರಿದವರೆಂದು ಹಳ್ಳಿಯ ಹೆಂಗಸಾದ ನನ್ನ ಮುದಿತಾಯಿಗೆ ಹೇಗೆ ಗೊತ್ತಾಗಬೇಕು?

ಈ ಭಾವನೆಗಳನ್ನು ತಾಯಿಗೆ ತಿಳಿಸುವುದರಲ್ಲಿ ಔಚಿತ್ಯವಿರಲಿಲ್ಲ. ಬರೆದಿದ್ದರೆ ಅವಳ ಭೀತಿ ಮತ್ತೂ ಹೆಚ್ಚುತ್ತಿದ್ದಿತಷ್ಟೆ. "ಇನ್ನು ಕೆಲವು ದಿವಸಗಳಲ್ಲಿ ಖಂಡಿತವಾಗಿ ಬರುತ್ತೇನೆ. ಅಬ್ದುಲ್ಲನನ್ನು ಕರೆತರುವುದಕ್ಕೆ ವಿಶ್ವಪ್ರಯತ್ನ ಮಾಡುತ್ತೇನೆ" ಎಂದಿಷ್ಟೆ ಬರೆದೆ. ಇದಕ್ಕೆ ಅನುಕೂಲವಾಗಿ ಧನಿಗಳೂ ಬಂದು

ಬಿಟ್ಟರು. "ಮಿಸ್ಟರ್ ನಾಯಕ್! ಸದ್ಯಕ್ಕೆ ನಮ್ಮ ವಹಿವಾಟುಗಳನ್ನು ನಿಲ್ಲಿಸಬೇಕೆಂದಿದ್ದೇವೆ. ಈ ಮಾರಾಮಾರಿ ಯಾರಿಗೆ ಬೇಕು? ಹೇಳಿ. ಅದು ನಮ್ಮಂಥವರಿಗಲ್ಲ. ದೇವರ ದಯೆಯಿಂದ ಒಂದಿಷ್ಟು ಕಾಸನ್ನು ಕೂಡಿಸಿಟ್ಟಿದ್ದೇವೆ. ಹೊಟ್ಟೆಗಾಗಿ ದುಡಿಯಬೇಕಾದವರು ದುಡಿಯಬೇಕು. ನಮಗೆ ಇದ್ದುದನ್ನು ಉಳಿಸಿಕೊಂಡರಾಯಿತು. ನಿಮಗೆ ಮೂರು ತಿಂಗಳ ಸಂಬಳವನ್ನು ಧರ್ಮಾರ್ಥವಾಗಿ ಕೊಡುತ್ತೇವೆ. ಹೋಗಿ; ಊರಿಗೆ ಹೋಗಿ; ತಾಯಿಯನ್ನು ಕಂಡು ಸಂತೋಷಪಡಿಸಿರಿ. ಈ ಉರಿ ನಂದಲಿ; ಆಗ ಮತ್ತೊಮ್ಮೆ ತೊಡಗುತ್ತೇವೆ. ಬಂದು ಸೇರಿಕೊಳ್ಳಿ. ನಿಮ್ಮ ಜಾಗ ನಿಮಗಾಗಿಯೇ ಕಾದಿರುವುದು!" ಎಂದು ನನ್ನ ಮೂರು ತಿಂಗಳ ಸಂಪತ್ತನ್ನು ಕೈಯಲ್ಲಿಟ್ಟು ಕಳುಹಿಸಿಕೊಟ್ಟರು. ಅವರು ಹೊಟ್ಟೆಗಾಗಿ ದುಡಿಯಬೇಕಾಗಿರಲಿಲ್ಲ. ದುಡಿಯಬೇಕಾದವರು ನನ್ನಂಥವರು. ಹೊಟ್ಟೆ ಕಾವಲಿಯಂತೆ ಕಾವೇರಿದೆ. ತಂಪಿಸಬೇಕು. ತಂಪಿಸುವ ಪ್ರಯತ್ನದಲ್ಲಿ ಸಾಯಬೇಕಾದರೆ ಸಾಯಬೇಕು, ಎನ್ನುವ ಇವರ ಮಾತಿನ ಧ್ವನಿ ಕರ್ಕಶವಾಗಿ ಕೇಳಿದರೂ ಊರು ಬಿಟ್ಟೋಡುವ ಚಿಂತೆಯಲ್ಲಿದ್ದ ನನಗೆ ಬಿಡುಗಡೆ ಸಿಕ್ಕಿದುದರಿಂದ ಸಮಾಧಾನವಾಗದಿರಲಿಲ್ಲ. ಮರುದಿನವೇ ಟಿಕೇಟು ತೆಗೆದುಕೊಂಡು ಹೊರಡಬಹುದಾಗಿತ್ತು. ಆದರೆ ತಾಯಿಯ ಆಜ್ಞೆ. ಅಬ್ದುಲ್ಲನನ್ನು ಹುಡುಕಬೇಕು! ಈ ಮುಂಚೆ ಅವಕಾಶ ಮಾಡಿಕೊಂಡು ಹುಡುಕಬೇಕಾಗಿದ್ದರೆ, ಈಗ ಇರುವುದೆಲ್ಲ ಅವಕಾಶವೇ! ರಸ್ತೆ ರಸ್ತೆ ಹುಡುಕುವುದಕ್ಕೇನೂ ಆತಂಕವಿರಲಿಲ್ಲ. ತಾನು ಬರೆವ ಮಾತಿನ ಪರಿಣಾಮವೇನಾದೀತೆಂದು ಗೊತ್ತಿದ್ದರೆ ನನ್ನ ತಾಯಿ ಹಾಗೆ ಬರೆಯುತ್ತಿರಲಿಲ್ಲ. "ಹುಡುಕಿದ್ದೇನೆ; ಸಿಕ್ಕಲಿಲ್ಲ" ಎಂದು ನಂಬಿಸುವುದು ಸುಲಭವಾಗಿತ್ತು. ಆದರೆ ತಾಯಿಯ ಪತ್ರದಲ್ಲಿದ್ದ ಒಂದು ಒಕ್ಕಣೆ—ನನ್ನ ಹಾಗೆ ಪಾತುಮ್ಮನೂ ಒಬ್ಬನೇ ಮಗನ ಮೇಲೆ ಆಸೆಯಿಟ್ಟು ದಿನಗಳನ್ನು ನೂಕುತ್ತಿರುವ ಬಡ ವಿಧವೆಯಲ್ಲವೇ?—ಎಂಬುದು ನನ್ನ ಮನಸ್ಸನ್ನು ಕರಗಿಸಿತು. ಈ ತಾಯಿ ನನ್ನ ತಾಯಿ; ಆ ತಾಯಿ ಅಬ್ದುಲ್ಲನನ್ನು ಹೆತ್ತತಾಯಿ. ಇವಳು ಅವಳಲ್ಲಿ ಐಕ್ಯಗೊಂಡಿದ್ದಾಳೆ. ಈ 'ಮಗ' 'ಆ ಮಗ'ನಿಂದ ಭಿನ್ನನಾಗಿರುವುದು ಹೇಗೆ? ಅಬ್ದುಲ್ಲ ಮುಸಲ್ಮಾನ; ನಾನು ಹಿಂದು. ನಾವು ಪೂರ್ವಕ್ಕೆ ಮುಖ ತಿರುಗಿಸಿ ಪ್ರಾರ್ಥನೆ ಮಾಡುವವರಾದರೆ ಅವನ ಧರ್ಮದವರು ಪಶ್ಚಿಮಕ್ಕೆ ನೋಡಿ ನಮಾಜು ಮಾಡುವವರು. ನಾನು ಗೋಪೂಜಕ. ಆತ ಗೋಭಕ್ಷಕ. ಹೊರಗಿನ ಭೇದ ಇಷ್ಟಿದ್ದರೂ ನಾನು ನನ್ನ ತಾಯಿಯ ಮಗನಾಗಿರುವಂತೆ ಅಬ್ದುಲ್ಲ ತನ್ನ

ತಾಯಿಯ ಮಗ. ನನ್ನ ತಾಯಿಗೆ ನನ್ನಲ್ಲಿರುವ ವಾತ್ಸಲ್ಯವನ್ನೂ ಅವನ ತಾಯಿಗೆ ಅವನಲ್ಲಿರುವ ವಾತ್ಸಲ್ಯವನ್ನೂ ತೊಲೆಯಲ್ಲಿಟ್ಟು ತೂಗಿದರೆ ಹೆಚ್ಚು ಕಡಿಮೆ ಕಂಡೀತೆ? ಜೇನು ಯಾವ ಪುಷ್ಪಕೋಶದಲ್ಲಿದ್ದರೂ ಜೇನೆ. ಬಂಗಾರ ಯಾವ ಅದುರಲ್ಲಿದ್ದರೂ ಬಂಗಾರವೆ. ಆ ತಾಯಿಯ ಹಂಬಲು ಹಾರೈಕೆಗಳೂ ಕಣ್ಣೀರು ನಿಟ್ಟುಸಿರುಗಳೂ ಈ ತಾಯಿಯವುಗಳಿಂದ ಬೇರಾಗಿರಬಹುದೆ? ಆಕೆಯ ಪ್ರೀತಿ ಸಂಕಟದ ಎದೆ ಬಡಿತ ನನ್ನ ತಾಯಿಯದಕ್ಕಿಂತ ಕಡಿಮೆ ಆವೇಗವುಳ್ಳದಾಗಿರಬಹುದೆ? ಎಂದೂ ಇಲ್ಲ. ಮಕ್ಕಳು ಮುಖಕ್ಕೆ ಮುಸುಕು ಹಾಕಿ ಗುಮ್ಮನಾಟವಾಡುವಂತೆ ನಾವು ಧರ್ಮದ ಮುಸುಕಿನಲ್ಲಿ ಪರಸ್ಪರವಾಗಿ ಬೆದರಿಸುತ್ತೇವೆ. ಬೊಂಬಯಿಯಲ್ಲಿ ನಾನು ಹಿಂದು; ಅಬ್ದುಲ್ಲ ಮುಸಲ್ಮಾನ. ನಾನು ಅವನನ್ನು ಹೊಡೆಯಬೇಕು; ಆತ ನನ್ನನ್ನು ತಿವಿಯಬೇಕು. ಆದರೆ ನಮ್ಮ ಹಳ್ಳಿಗೆ ಕಾಲಿಟ್ಟೊಡನೆ ನಾವು ಅಣ್ಣ ತಮ್ಮಂದಿರಲ್ಲವೆ? ನಾವು ಒಡಗೂಡಿದ ಶಾಲೆ; ಹಣ್ಣು ತಿಂದ ಚೂರಿಮುಳ್ಳು ಗಿಡ; ಸುತ್ತಿದ ಮಜಲು; ಹಾರಿದ ದರೆ; ಏರಿದ ಗುಡ್ಡ—ಎಲ್ಲವೂ ನಮ್ಮನ್ನು "ಇಲ್ಲಿಯೇ ನಿಮ್ಮ ಮನೆ; ಇಲ್ಲಿಯೇ ನಿಮ್ಮ ಜೀವದ ಬೇರು; ಈ ಹೊಲದ ಮುದ್ದು ಕೂಸುಗಳು ನೀವು; ಒಂದೇ ಹೊಟ್ಟೆಯಿಂದ ಹೊರಟುಬಂದ ಅಣ್ಣ ತಮ್ಮಂದಿರು ನೀವು" ಎಂದು ಕೂಗಿ ಕರೆಯುವಾಗ "ಅಲ್ಲ" ಎನ್ನುವುದು ಸಾಧ್ಯವೇ? ಪಾತುಮ್ಮನಿಗೆ ಪುತ್ರದಾನ ಮಾಡುತ್ತೇನೆ—ಎಂದು ಹುಡುಕಾಡಲು ನಿರ್ಧರಿಸಿದೆ.

ಆದರೆ ಹುಡುಕುವುದು ಎಲ್ಲಿ ಹೇಗೆ? ಮೈಬಿಟ್ಟು ಅಲೆಯುವ ಹಾಗಿಲ್ಲ. ಮನ ಬಂದ ಕಡೆ ವಿಚಾರಿಸುವ ಹಾಗಿಲ್ಲ. ನಾನು ಆ ಜಾತಿಯ ಒಬ್ಬನನ್ನು ಹುಡುಕುತ್ತೇನೆಂದರೆ ನನ್ನ ಪ್ರಾಣಕ್ಕೆ ಸಂಚಕಾರ ಆಗಲೂ ಬಹುದು. ಅವನು ಇರುವನೋ ಎಲ್ಲಾದರೂ ಇರುವನೋ ಗೊತ್ತಿಲ್ಲ. ಒಂದು ವೇಳೆಗೆ ಗೊತ್ತಾದರೆ ಅವನಿರುವಲ್ಲಿಗೆ ಹೋಗುವುದಾದರೂ ಹೇಗೆ? ಯಾರಿಂದಲಾದರೂ ವಿಳಾಸ ತಿಳಿದು ಪತ್ರ ಬರೆದೆನೆಂದರೆ ಆತ ಉತ್ತರ ಕೊಡುವನೇ? ಒಂದು ವೇಳೆ ಕೊಟ್ಟನೆಂಧರೆ ಅವನದೇ ಉತ್ತರ ಎಂದು ನಂಬುವುದು ಹೇಗೆ? ಆತನ ಸಜೀವ ಮೂರ್ತಿ ಕಣ್ಣಮುಂದೆ ಗೋಚರಿಸುವ ವರೆಗೆ ಅವನಿರವನ್ನು ಒಪ್ಪಿಕೊಳ್ಳುವುದಕ್ಕೆ ಆಸ್ಪದವುಂಟೆ? ಆತನಿಲ್ಲಿಗೆ ಬರುವುದುಂಟೆ? ಸಾಧ್ಯವೇ? ತಾಯಿ ದೊಡ್ಡ ಒಗಟನ್ನೆ ಕೊಟ್ಟಿದ್ದಳು. ಬಿಚ್ಚುವುದು ಹೇಗೆ? ತಿಳಿಯಲಿಲ್ಲ.

ನಮ್ಮ ಮಾಗಣೆ ಶ್ಯಾನುಭಾಗರು ಅಣ್ಣಪ್ಪಯ್ಯನವರ ಮಗ ನಾರ್ಣಪ್ಪಯ್ಯನವರು, “ಎ. ಎನ್. ಬಾಳೂರ್ ಕಂಪೆನಿ” ಎಂಬ ಹೆಸರಲ್ಲಿ ಪಿಂಗಾಣಿಯ ಹರದನ್ನು ಸಾಗಿಸುತ್ತಿದ್ದಾರೆಂದು ನನಗೆ ಗೊತ್ತು. ಹಲವು ವೇಳೆ ಅವರು ನನ್ನನ್ನು ಕಂಡುದೂ ಉಂಟು. ಮುಸುಲ್ಮಾನರ ಬೀದಿಯ ಒತ್ತಿನಲ್ಲಿಯೇ ಅವರ ಅಂಗಡಿ ಮಂಡಿ. ಹೋಗುವುದೂ ಬರುವುದೂ ಅಪಾಯಕರ. ನೇರಾದ ದಾರಿಯನ್ನು ಬಿಟ್ಟು ಸುತ್ತಾಡಿಯಾದರೂ ಬಾಳೂರರಲ್ಲಿಗೆ ಹೋಗಿ ಬರೋಣ; ಎಂದು ತೋರಿತು. ಒಂದೆರಡು ವರ್ಷಗಳ ಹಿಂದೆ ಸಟ್ಟಾ ಆಡುತ್ತಿದ್ದ ಅಬ್ದುಲ್ಲನ ಕತೆಯನ್ನು ಅವರೇ ನನಗೆ ಹೇಳಿದ್ದರು. ವ್ಯಾಪಾರಿಗಳಿಗೆ ತಿಳಿಯದುದಿಲ್ಲ. ಅವರೋದದ ಜಾತಕಗಳಿಲ್ಲ. ಎಂಬ ಕಾರಣದಿಂದ ಬಾಳೂರರ ಪಿಂಗಾಣಿಯ ಮಂಡಿಗೆ ಹೋಗಿ, ಅವರನ್ನು ಕಂಡು ಸ್ವಲ್ಪಕಾಲ ಯೋಗಕ್ಷೇಮಗಳನ್ನಾಡಿ ಹೊರಡುವಾಗ ಮುಖ್ಯ ವಿಷಯವನ್ನೆತ್ತಿದೆ.

“ಯಾರು ಮೋಯುದ್ದಿನ್ ಬ್ಯಾರಿಯ ಮಗನೆ?” ಎಂದವರು ಅಪಹಾಸ್ಯದ ಸ್ವರದಲ್ಲಿ ಪ್ರಶ್ನಿಸಿದರು.

“ಹೌದು; ಅವನೇ!”

“ಅವನೇನು ರಕ್ತ ಸಂಬಂಧಿಯೆ?”

“ಸ್ನೇಹ ಸಂಬಂಧಿ!”

“ಒಳ್ಳೆಯ ಸ್ನೇಹಿತರನ್ನು ಇಟ್ಟುಕೊಂಡಿದ್ದೀರಿ ನಾಯಕರೆ!” ಎಂದವರು ವಿಕಟವಾಗಿ ನಕ್ಕರು.

“ಹಿಂದಿನ ಪರಿಚಯ ನಾರ್ಣಪ್ಪಯ್ಯ! ಹಳೆಯ ಚಟ—ಹಳೆಯ ರೋಗ—ಹಳೆಯ ಸ್ನೇಹ . . . . ಇವುಗಳನ್ನು ಬಿಡುವುದು ಕಷ್ಟವಲ್ಲವೆ?”

“ಅದು ನಿಜವೆ. ಆದರೆ ಈ ಕಾಲ ಹಳತಲ್ಲವಷ್ಟೆ? ಈ ಬೊಡ್ಡಿ ಮಕ್ಕಳು ಪಾಕಿಸ್ತಾನಕ್ಕೆ ಹೋಗುತ್ತಾರೆ. ಹೋಗುವ ಮುಂಚೆ ಹಿಂದುಸ್ಥಾನವನ್ನು ಹಾಳುಗೆಡವಿ ಹೋಗುತ್ತಾರೆ. ಸಾಧ್ಯವಿರುವಷ್ಟು ಜನಗಳನ್ನು ಕೊಂದು ಹೋಗುತ್ತಾರೆ. ಮತ್ತೆ ನಿನ್ನ ಅಬ್ದುಲ್ಲನನ್ನೇನು ಮಾಡುವೆ? ಕೊರಳಿಗೆ ಕಟ್ಟಿಕೊಳ್ಳುವೆಯೊ? ಅಥವಾ ಪಾಕಿಸ್ಥಾನಕ್ಕೆ ವಲಸೆ ಹೋಗುವೆಯೊ?” ಎಂದು ಜಬ್ಬಿನಿಂದ ನನ್ನನ್ನು ಪ್ರಶ್ನಿಸಿದರು.

“ಎಲ್ಲ ಧರ್ಮಗಳಲ್ಲಿಯೂ ತಿಳಿಗೇಡಿಗಳಿದ್ದಾರೆ!”

"ನಿಜ; ಆದರೆ ಹೀಗೂ ಮಾಡಬೇಕೆ? ಹಿಂದುಗಳು ಹೀಗೆಂದೂ ಮಾಡಿಯಾರೇ?" ಎಂದು ಬಾಳೂರರು ನೂರಾರು ಉದಾಹರಣೆಗಳನ್ನಿತ್ತು ಮುಸಲ್ಮಾನ ಧರ್ಮವೊಂದೇ ಪಾತಕ ಧರ್ಮವೆಂದೂ, ಹಿಂದೂ ಧರ್ಮವೊಂದೇ ಪಾವನ ಧರ್ಮವೆಂದೂ ಸಿದ್ಧಾಂತ ಪಡಿಸಿದರು. ನಾನವರನ್ನು ಆಕ್ಷೇಪಿಸಲಿಲ್ಲ. ಅವರ ಸಿದ್ಧಾಂತ ನನಗೆ ಮೆಚ್ಚಲೂ ಇಲ್ಲ. ನಾನು ಬಂದುದು ಅಬ್ದುಲ್ಲನ ತುಬ್ಬಿಗೆ. ಅವನು ಬೇರೇನಾಗಿದ್ದರೂ ಚಿಂತೆಯಿಲ್ಲ. ಅಬ್ದುಲ್ಲನಾಗಿದ್ದರೆ ಸಾಕು. ನಾನು ಬೊಂಬಯಿಗೆ ಹೊರಟೆಂದು, ನನ್ನನ್ನು ಮನೆಗೆ ಬರಮಾಡಿ ಎಳೆನೀರು ತನಿಹಣ್ಣುಗಳನ್ನು ಕೊಟ್ಟು ಕಣ್ಣೀರಿನ ಸೇಸೆಯಿಂದ ಹರಸಿ ಕಳುಹಿಸಿದ ಪಾತುಮ್ಮನ ಮಗ ಅಬ್ದುಲ್ಲನೆಂದಾದರೆ ಸಾಕು. ಒಳಭಾವನೆಗಳನ್ನು ನಾನು ಪ್ರಕಟಿಸಲಿಲ್ಲ. ಒಂದು ನಿಮಿಷ ಮೌನಿಯಾಗಿದ್ದ ನನ್ನೆದೆಯನ್ನೋದಿ ಪಿಂಗಾಣಿಯ ವ್ಯಾಪಾರಿಗಳು ಹೀಗೆಂದರು:

"ಮಿಸ್ಟರ್ ನಾಯಕ್! ಈ ಹುಚ್ಚಾಟ ಬೇಡ. ಅಬ್ದುಲ್ಲ ಇದ್ದಾನೋ . . . . ಈ ಮುಂಚೆ ಯಾವುದಾದರೊಂದು ಚರಂಡಿಯಲ್ಲಿ ಬಿದ್ದು ಕೊಳೆತು ಹೋಗಿದ್ದಾನೊ? ಯಾರು ಬಲ್ಲರು? ಆತ ಶುದ್ಧ ಪೋಕರಿಯಾಗಿದ್ದಾನೆ. ಹಸಿ ಪುಂಡನಾಗಿದ್ದಾನೆ. ಇಂಥವರನ್ನು ಪುಸಲಾಯಿಸುವ ಪಾಕಿಸ್ಥಾನಿಗಳು ತುಂಬ ಇದ್ದಾರೆ. ದುಡ್ಡು ಕೊಡುತ್ತಾರೆ; ಹೆಂಡ ಕುಡಿಸುತ್ತಾರೆ. ಶಸ್ತ್ರ ಕೊಡುತ್ತಾರೆ. ಕಾಫರರನ್ನು ಕೊಲ್ಲಿ! ಸೂರೆ ಮಾಡಿ! ಸುಲಿಗೆ ಮಾಡಿ! ಎಂದು ಕಳುಹಿಸುತ್ತಾರೆ. ಇಂಥವರ ಕಾರಣದಿಂದ ಬೊಂಬಯಿ ದೊಡ್ಡ ರೌರವವಾಗಿದೆ. ದುಡ್ಡಿರುವವರು ಮದ್ದತ್ತು ಮಾಡಿ ಹಿಂದೆ ಉಳಿದುಬಿಡುತ್ತಾರೆ. ಇವನಂತಹ ಅನ್ನದಾಸರು ಸಾವಿರಾರು ಮಂದಿಯನ್ನಿಟ್ಟುಕೊಂಡು ತಮ್ಮ ಹಟವನ್ನು ಮೆರೆಯಿಸುತ್ತಾರೆ. ಹಾಗಾದರೆ ನನ್ನಂಥವರು ಮುಸಲ್ಮಾನರ ನೆರೆಯಲ್ಲಿಯೇ ಹೇಗೆ ವಾಸಿಸುತ್ತಾರೆ? ಎಂದು ನೀನು ಕೇಳಬಹುದಲ್ಲ. ನಮ್ಮದೂ ಅದೇ ವಿದ್ಯೆ. ಮುಳ್ಳನ್ನು ಮುಳ್ಳಿನಿಂದ ಚುಚ್ಚಿ ತೆಗೆಯಬೇಕು. ಒಂದೇಟಿಗೆ ಹತ್ತೇಟು ಕೊಡಬೇಕು ಎನ್ನುವುದೇ ನಮ್ಮ ಇಂದಿನ ಮಂತ್ರವಾಗಿರಬೇಕು. ನಿನ್ನ ಗಾಂಧಿಯ ಅಹಿಂಸೆ ಈ ಮೃಗಗಳ ಮಧ್ಯದಲ್ಲಿ ಅಲ್ಲ. ಅದು ಬ್ರಿಟಿಷರ ಮಧ್ಯದಲ್ಲಿ ಆಯಿತು. ಅವರು ದುಷ್ಟರಾದರೂ ಮನುಷ್ಯರಪ್ಪ . ." ಎಂದು ರಾಜಕೀಯಕ್ಕೂ ಇಳಿದರು. "ಹಾಗಾದರೆ ನಿಮಗೆ ಅಬ್ದುಲ್ಲನ ಸುಳಿವು ಹತ್ತಲಿಲ್ಲ!" ಎಂದು ಮಾತಿಗೆ ತಡೆ ಹಾಕುವುದರಲ್ಲಿದ್ದೆ.

"ನಿನ್ನ ಅಬ್ದುಲ್ಲನೋ . . . . ಅವನ ಪುರಾಣವನ್ನು ಬಿಚ್ಚುತ್ತೇನೆ"

ಎಂದವರು ಮೊದಲು ಮಾಡಿದರು: "ಒಂದು ತಿಂಗಳ ಹಿಂದಿನ ಕತೆಯಿದು. ರಾತ್ರಿ ಒಂಬತ್ತು ಘಂಟೆಯಾಗಿತ್ತು. ಅಂಗಡಿ ಬಾಗಿಲುಗಳು ಬೀಳುವುದರಲ್ಲಿದ್ದುವು. ಫಕ್ಕನೆ ಹತ್ತೆಂಟು ಜನ ಓಡಿಬಂದರು. ಬಾಗಿಲನ್ನೆಳೆದು ಬಲಾತ್ಕಾರದಿಂದ ನುಗ್ಗುವುದರಲ್ಲಿದ್ದರು. ಕಾಯುತ್ತಿದ್ದ ಜವಾನನನ್ನು ಕೊರಳೊತ್ತಿ ರಸ್ತೆಗೆ ಒಗೆದರು. ಒಳಗೆ ಕಾಲಿಟ್ಟರು. ನನಗೀ ಮಕ್ಕಳ ಬುದ್ಧಿ ತಿಳಿಯದೇ? ನಾನು ಹತ್ತೆಂಟು ದಡಿಗರನ್ನು ಸಾಕುತ್ತೇನೆ. ಕೋವಿ ಗುಂಡುಗಳನ್ನು ಒದಗಿಸುವುದೇನೂ ಕಷ್ಟವಿಲ್ಲ. ಕರೆನ್ಸಿ ನೋಟುಗಳಿಂದ ಕೋವಿ ಗುಂಡುಗಳು ತಯಾರಾಗುತ್ತವಲ್ಲವೆ? ನನ್ನ ಕಡೆಯವರು ಬಂದು ಈ ಪುಂಡರ ಮೇಲೆ ಬಿದ್ದರು. ಎಂತಹ ಒಳ್ಳೆಯ ಮದ್ದು? ಸರಕಾರದಿಂದ ಸಹಾಯಪಡೆಯಬೇಕಾಗಿದ್ದರೆ, ಪುಂಡರಿಂದ ಸುಲಿಗೆ ಮಾಡಿಸಿಕೊಂಡು, ಕೊಲೆ ಮಾಡಿಸಿಕೊಂಡು, ಫಿರ್ಯಾದಿ 'ಹೂಡಬೇಕು' ನನ್ನದು ಸುಲಭೋಪಾಯ . . . . ಗುದ್ದಿಗೆ ಗುದ್ದು . . . ಸುಲಿಯ ಬಂದವರು ನನ್ನ ಜನಗಳನ್ನು ಕಂಡು ಅಲ್ಲಿಯೇ ಮಾಯವಾಗಿ ಬಿಟ್ಟರು. ಅವರ ಪೈಕಿ ಒಂದು ಜನಕ್ಕೆ ನಿನ್ನ ಅಬ್ದುಲ್ಲನ ಚಹರೆಯೇ ಇತ್ತು. ಹಿಂದೆ ಕೇಳಿದುದೂ ಅಂದು ಕಂಡುದೂ ಒಂದೇ ತರ. ಅವನೇ ಆತನೆಂಬುದರಲ್ಲಿ ನನಗಂತೂ ಸಂದೇಹವಿಲ್ಲ. ಅವಳ ಮಗ . . . ಇವನ ಮಗ ಎಂದು ನೋಡುವ ಕಾಲ ಇದಲ್ಲ. ಈ ದುಷ್ಟರ ಕತ್ತಿ ಕೋವಿಗಳಿಗೆ ಬಲಿಯಾಗಿ ಬಿದ್ದ ಈ ಬಡಪಾಯಿಗಳಿಗೆ ತಾಯಿತಂದೆಗಳಿಲ್ಲವೆ? ಎಷ್ಟೋ ಜನರನ್ನು ಕೊಂದಿದ್ದಾರೆ. ಇವರ ತಾಯಿತಂದೆಗಳ ವಿಷಯದಲ್ಲಿ ಮರುಕಪಟ್ಟವರಾರು? 'ಶಠಂ ಪ್ರತಿ ಶಾಠ್ಯಂ!' ಶಾಸ್ತ್ರ ಹಳೆಯದಾದರೂ ಅದರಲ್ಲಿರುವ ಪ್ರತಿಯೊಂದು ಮಾತು ಹೊನ್ನಿಗಿಂತ ಮೇಲು. ಅವಿವೇಕಮಾಡಬೇಡಿನಾಯಕರೇ . . . . ನಿಮಗೂ ಒಬ್ಬಳು ತಾಯಿಯಿದ್ದಾಳೆ. ಪಾತುಮ್ಮನ ತಾಯಿಗೆ ಪಾಕಿಸ್ಥಾನದಲ್ಲಿ ಸ್ಥಳವುಂಟು; ನಿಮ್ಮ ತಾಯಿಗೆ?"

"ಹಾಗಾದರೆ ಆ ಆಸೆಯನ್ನು ಬಿಟ್ಟು ಬಿಡುತ್ತೇನೆ" ಎಂದು ಬಾಳೂರರ ಸಮಾಧಾನಕ್ಕಾಗಿ ಹೇಳಿ ಮನಸ್ಸಿನಲ್ಲಿ ಅಬ್ದುಲ್ಲನ ಸ್ಮರಣೆಯನ್ನೆ ಆತುಕೊಂಡು ಅಲ್ಲಿಂದ ಹೊರಟೆ. ಬಾಳೂರರು ನನ್ನನ್ನು ಒಬ್ಬನನ್ನೇ ಬಿಡಲಿಲ್ಲ. "ನಿಮಗೆ ಅಬ್ದುಲ್ಲನ ತಾಯಿಯ ಮೇಲೆ ಕನಿಕರವಾದರೆ ನನಗೆ ನಿಮ್ಮ ತಾಯಿಯ ಮೇಲೆ ಕನಿಕರ. ಇನ್ನು ಮುಂದೆ ನೀವಿಲ್ಲಿಗೆ ಬರಬೇಡಿ. ನಾನಾದರೊ ಸಭ್ಯರಿಗೆ ಸಭ್ಯರು . . . ಪುಂಡರಿಗೆ ಪುಂಡರು. ಬರೆಯುವ ಲೆಕ್ಕಣಿಕೆ ನಿಮ್ಮ ಎದೆ ಧೈರ್ಯವನ್ನೆಲ್ಲ ಹೀರಿಬಿಟ್ಟಿದೆ." ಎನ್ನುತ್ತಾ ಟ್ರಾಮು ಬಂಡಿ ನಿಲ್ಲುವಲ್ಲಿಯವರೆಗೆ

ನನ್ನೊಡನೆಯೇ ಬಂದರು. ಒಂದು ಬಂಡಿ ಆಗಲೆ ಹೋಗಿತ್ತು. ಇನ್ನೊಂದು ಬರಲು ಸ್ವಲ್ಪ ತಡವಿತ್ತು. "ಜಾಗ್ರತೆ! ಜಾಗ್ರತೆ! ಸುತ್ತಲೂ ಕಣ್ಣು ತಿರುಗಿಸಿ ಕೊಳ್ಳಿ . . . ಅನೇಕ ವೇಳೆ ಇಂತಹ ಸ್ಥಳಗಳಲ್ಲಿ ರಕ್ತಪಾತವಾಗುತ್ತದೆ . . ." ಎಂದವರು ಜಾಗ್ರತೆಕೊಟ್ಟರು. ಇರಬಹುದು. ಅಲ್ಲವೆನ್ನುವಷ್ಟು ಜ್ಞಾನ ಮೂಢ ಪ್ರಾಣಿಯಾದ ನನಗುಂಟೇ? ಬಾಳೂರರು ಹೇಳಿದಂತೆ ಸುತ್ತಲೂ ಕಣ್ಣು ಹೊರಳಿಸುತ್ತಾ ಇದ್ದೆ.

ಒಂದು ನಿಮಿಷ ಆಗಿರಲಿಲ್ಲ. ನಮ್ಮ ಕಣ್ಣಿಗೆ ಕಾಣುವಷ್ಟು ದೂರದಲ್ಲಿ ಏನೋ ಗಲಭೆಯಾದಂತೆ ತೋರಿತು. ಜನರು ಓಡತೊಡಗಿದರು, ಅದೊಂದು ಕಿರಿಯೋಣಿ. ಹುಟ್ಟಿನಿಂದ ಜೇನು ನೊಣಗಳು ಹಾರುವಂತೆ ನೂರಾರು ಮಂದಿ ಓಡಿಬರುತ್ತಿದ್ದರು. ಸಿಳ್ಳುಗಳೂ ಕೇಳಿಸಿದುವು. ಭಯವಿಲ್ಲ. ಓಡಬೇಡಿರಿ ನಾಯಕರೇ! ಈ ವಠಾರದ ಪೊಲೀಸು ಪಡೆಗಳಿಗೆಲ್ಲ ನನ್ನ ಗುರುತಿದೆ. ನಾನು ಜತೆಯಲ್ಲಿರುವುದರಿಂದ ನಿಮಗೆ ಭಯವಿಲ್ಲ . . . ಎಂದವರು ಪರಿಸ್ಥಿತಿಯ ವಿಷಮತೆಯನ್ನು ತಿಳಿಸಿದರು. ಅವರ ಮಾತು ನನ್ನ ಎದೆಯನ್ನೂ ಕದಡಿತು. ಬಾಳೂರರ ಬಳಿಯಲ್ಲಿದ್ದೇನೆ ಎಂಬುದೊಂದೇ ನನ್ನ ಧೈರ್ಯಕ್ಕೆ ಕಾರಣ ವಾಗಿತ್ತು. ಕದಲದೆ ನಿಂತೆ . . . . ಅಳುಕದವನಂತೆ ನಿಂತೆ . . . . ಗಲಭೆ ಅಲ್ಲಿಂದಲ್ಲಿಗೇ ನಿಲ್ಲುವ ಹಾಗೆ ತೋರಿತು. ಓಡುವ ಜನ ಆ ಕಡೆಗೇ ಓಡು ತ್ತಿದ್ದರಲ್ಲದೆ ಈ ಕಡೆಗೆ ಬರುತ್ತಿರಲಿಲ್ಲ. ಆದುದರಿಂದ ನನ್ನ ಧೈರ್ಯದ ಭಂಡವಳ ಹೆಚ್ಚುವುದಕ್ಕೆ ತೊಡಗಿತು. ಓಡುವವರನ್ನು ನೋಡುವುದರಲ್ಲಿ ಆಸಕ್ತಿಯೂ ಹುಟ್ಟಿತು. ಹಲವು ಟೊಪ್ಪಿಗಳು, ಹಲವು ಮುಂಡಾಸುಗಳು, ಕಂಡು ಕಾಣದಾದವು. ಆದರೆ ಒಂದು ಮುಖ ಕಂಡು ಕಾಣದಾಗಲಿಲ್ಲ. ನನ್ನ ನೆನಪನ್ನು ಕೆದರುವ ಹಾಗೆ ತೋರಿತು. ಎಲ್ಲೋ ನೋಡಿರಬಹುದಾದ ಮುಖವೆಂಬ ಅನುಮಾನವಾಯಿತು. ಓಡಿದ ನೂರಾರು ಮಂದಿಯಲ್ಲಿ ಅದೊಂದೇ ಮುಖ ನನ್ನ ಗಮನವನ್ನು ಸೆಳೆಯಬೇಕೆ? ಖಂಡಿತ . . . . ಈ ಮುಖವನ್ನು ಕಂಡಿದ್ದೇನೆ . . . ಅಬ್ದುಲ್ಲನನ್ನೇ ಹೋಲುವ ಮುಖ . . . ಎತ್ತರವೂ ಅಷ್ಟೆ . . . ನಡೆಯುವ ಹದನೂ ಹಾಗೆಯೆ . . . ಮುಖದಲ್ಲೇನೋ ಸ್ವಲ್ಪ ವ್ಯತ್ಯಾಸವಾದಂತಿದೆ. ಆದರೆ ಕೆರೆಕೋಡಿಯ ಪಾತುಮ್ಮನೆಂಬ ಬಡ ವಿಧವೆಯ ಮಗನ ಗುರುತುಕೊಡದಂತಹ ವ್ಯತ್ಯಾಸವೇನೂ ಆಗಿರಲಿಲ್ಲ. ಸಂದೇಹವಿಲ್ಲ, ಕೂಗಿಬಿಡುತ್ತೇನೆ, . . . ಆತನ ತಾಯಿಯ ಕರೆಯನ್ನು ಅವನ ಕಿವಿಗೆ ಮುಟ್ಟಿಸಿ ಬಿಡುತ್ತೇನೆ. ಇಷ್ಟಾದರೆ ಕೆಲಸ ತೀರಿತು. ತಾಯಿಯ

ಆಜ್ಞೆಯನ್ನು ನೆರವೇರಿಸಿದಂತಾಯಿತು . . . ಎಂದು ಎಣಿಸುತ್ತಾ ಬಳಿಯಲ್ಲಿದ್ದ ಬಾಳೂರರ ನೆನಪಿಲ್ಲದೆ, ಉಚ್ಚ ಸ್ವರದಲ್ಲಿ "ಅಬ್ . . ದು . ." ಎಂದೆರಡಕ್ಷರ ಗಳನ್ನು ಒದರಿದೆನೋ ಇಲ್ಲವೊ . . . ಬುಸುಗುಟ್ಟುವ ಸರ್ಪನಂತೆ ಪಿಂಗಾಣಿಯ ವ್ಯಾಪಾರಿಗಳು ನನ್ನ ಮೇಲೆ ನೆಗೆದರು. ಸೊಂಟಕ್ಕೆ ಬಲವಾಗಿ ಚಿವುಟಿದರು. "ಮುಚ್ಚೆ ಬಾಯಿ!" ಎಂದು ರೋಷಾವೇಶದಿಂದ ಗದರಿಸಿದರು. ಅವರ ಕೋಪವು ಅಬ್ದುಲ್ಲ ಎಂಬ ನಾಮದ ಕೊನೆಯಕ್ಷರವನ್ನು ನನ್ನ ಗಂಟಲಿನಿಂದ ಕಿತ್ತು ನುಂಗಿಬಿಟ್ಟಿತು. ಮಹಾಪರಾಧ ಮಾಡಿದವನಂತೆ ನಾನು ಬೆಪ್ಪನಾದೆ. ಬಾಳೂರರು "ಏನು ಅವಿವೇಕ ಇದು ನಾಯಕರೇ! ಆ ಹೆಸರನ್ನು ಎತ್ತಿದ್ದರೆ ಏನಾಗುತ್ತಿದ್ದಿತೆಂದು ಬಲ್ಲಿರಾ? ಆ ದುಷ್ಟರ ನೋಟ ನಮ್ಮ ಮೇಲೆ ಬೀಳ ಬಹುದಾಗಿತ್ತು. ಇಲ್ಲೆ ಬಂದು ನಿಂತ ಹಿಂದೂ ಪ್ರಯಾಣಿಕರು ಖತಿಗೊಂಡು ನಮ್ಮ ಮೇಲೆ ಬೀಳಬಹುದಾಗಿತ್ತು. ಹಿಂದಿನ ಕಾಲದಲ್ಲಿ ಅವರವರ ವೇಷದಿಂದ ಅವರವರ ಧರ್ಮವನ್ನು ಕಂಡುಹಿಡಿಯ ಬಹುದಾಗಿತ್ತು. ಈ ಮಾರಾಮಾರಿ ಆರಂಭವಾದ ಮೇಲೆ, ಹಿಂದುಗಳಾರು? ಮುಸಲ್ಮಾನರಾರು? ಶತ್ರುಗಳಾರು? ಮಿತ್ರರಾರು? ತಿಳಿಯುವುದು ಕಷ್ಟವಾಗಿದೆ. ಒಂದು ಜಾತಿ ಇನ್ನೊಂದು ಜಾತಿಯ ವೇಷದಲ್ಲಿ ಸಂಚರಿಸುತ್ತಿದೆ. ಇಷ್ಟೂ ತಿಳಿಯದೆ ನಿಮಗೆ? ನಿಮಗೆ ಅಬ್ದುಲ್ಲನ ಹುಚ್ಚು ಹಿಡಿದಿದೆ. ಊರಿಗೆ ಸುಖವಾಗಿ ತಲಪಿದ ಮೇಲೆ ಅಬ್ದುಲ್ಲನ ಸಹಸ್ರ ನಾಮವನ್ನು ಜಪಿಸಿದರಾಯಿತು." ಅವರಿಷ್ಟು ಹೇಳುವಷ್ಟ ರಲ್ಲಿ ಟ್ರಾಮು ಬಂತು. ಜನರ ಒತ್ತಾಟ ಬಹಳವಾಗಿತ್ತು. ಸ್ಥಳ ಸಿಕ್ಕಿದರೆ ಬದುಕಿದೆ ಎಂದು ಫಕ್ಕನೆ ಒಳಗೆ ಹಾರಿಬಿಟ್ಟೆ. ಟ್ರಾಮು ಹೊರಟಿತು. ಬಾಳೂರರಿಗೆ ಒಂದು ನಮಸ್ಕಾರಕೊಡುವುದಕ್ಕೂ ಅವಕಾಶವಿರಲಿಲ್ಲ.

ಟ್ರಾಮಿನ ಒಳಗಿದ್ದವರು ನಗುತ್ತಿದ್ದರು. ಯಾರೋ ತುಂಟ ಮಕ್ಕಳು ಪಟಾಕಿ ಸುಟ್ಟರೆಂದೂ ಆ ಧ್ವನಿಕೇಳಿ ಬೀದಿಯುದ್ದಕ್ಕೂ ಜನರು ಓಡಿದರೆಂದೂ, ಪೊಲೀಸರು ಬರಬೇಕಾಯಿತೆಂದೂ ಕೊನೆಗೆ ಯಾವ ಅವಾಂತರವೂ ಆಗಲಿಲ್ಲ ವೆಂದೂ ಒಳಗೆ ಕುಳಿತವರೊಬ್ಬರು ಆಡುತ್ತಿದ್ದರು. ನನಗೆ ಅದನ್ನು ಕೇಳುವ ಕುತೂಹಲವಿರಲಿಲ್ಲ. ಕೇಳಬಹುದಾಗಿದ್ದರೆ ಅಬ್ದುಲ್ಲನ ಸಮಾಚಾರವನ್ನು ಕೇಳುತ್ತಿದ್ದೆ. ಅಬ್ದುಲ್ಲ ಅಲ್ಲಿದ್ದನೇ? ಎಂದು ಪ್ರಶ್ನಿಸುತ್ತಿದ್ದೆ. ನನಗೆ ಅಬ್ದುಲ್ಲ ಬಾಲ್ಯಸ್ನೇಹಿತ, ಅವರಿಗೇನಾಗಬೇಕು? ಟ್ರಾಮಿನ ಒಳಗಿದ್ದವರೆಲ್ಲ ನನ್ನ ಧರ್ಮ ದವರು. ಆದರೂ ನನ್ನನ್ನು ಸಂದೇಹ ದೃಷ್ಟಿಯಿಂದ ನೋಡಿದರು; ಆಪಾದ ಮಸ್ತಕವಾಗಿ ನೋಡಿದರು. ವೇಷಪಲ್ಲಟಿಸಿದ ಕಳ್ಳನೇನೋ ಎಂದು ಪರೀಕ್ಷಿಸು

ವಂತೆ ನೋಡಿದರು. ನಾನು ಚಿಕ್ಕವನಾಗಿದ್ದಾಗ ತಾಯಿ ಪ್ರೀತಿಯಿಂದ ತೊಡಿಸಿದ ಒಂಟಿ ನನ್ನನ್ನು ಆ ದಿನ ಬದುಕಿಸಿತು.

ಬಾಳೂರರಲ್ಲಿಗೆ ಹೋದುದರಿಂದ ಮತ್ತೆ ಯಾವ ಲಾಭವಾಗದಿದ್ದರೂ ಒಂದು ತಿಳಿವಳಿಕೆಯಾಯಿತು. ದ್ವೇಷಭಾವ ಮೈಯನ್ನು ಮಾತ್ರ ಅಂಟಿರುವುದಲ್ಲ. ಹಲವರ ಜೀವದ ಆಳದಲ್ಲಿ ಬೇರುಬಿಟ್ಟಿದೆ. ಒಬ್ಬನಿಗೆ ಇನ್ನೊಬ್ಬನಲ್ಲಿ ನಂಬಿಕೆಯಿಲ್ಲ. ಒಂದು ಧರ್ಮದವನು ಇನ್ನೊಂದು ಧರ್ಮದವನು ಬದುಕಲು ಪಾತ್ರವಾದ ವ್ಯಕ್ತಿಯೆಂದು ಎಣಿಸಲಾರ. ಆತನಲ್ಲಿ ಗುಣವಿರಬಹುದೇ? ಹುಡುಕಲಾರ. ಇದ್ದರೆ ಆ ಗುಣವು ಗುಣವೆಂದು ಒಪ್ಪಲಾರ. ಅನ್ಯಧರ್ಮೀಯನಲ್ಲಿ ಗುಣವನ್ನರಸುವವನು ಸ್ವಧರ್ಮದ್ರೋಹಿ ಎನ್ನುವಂತಹ ಪಾಪ ಬುದ್ಧಿಯನ್ನು ಬೆಳೆಯಿಸಿಕೊಂಡಿದ್ದಾರೆ ಜನರು. ಈ ಯಾತನಾಮಯವಾದ ಅನುಭವವು ನನಗಾದುದು ಇಂದೇ. ಶತ್ರುಗಳು ಅಭಿಯೋಗಿಸುವರೆಂಬ ನಿರೀಕ್ಷಣೆಯಿಂದ ಕೋಟೆಗಾವಲಿನ ಭಟರು ಎಚ್ಚರದಲ್ಲಿರುತ್ತಾರೆ. ಸೈನಿಕರು ಕೋವಿ ಮದ್ದುಗಳನ್ನು ಬೆಚ್ಚಗಾಗಿ ಇಡುತ್ತಾರೆ. ಹಾಗೆ ಹೆಚ್ಚು ಜನರೂ ತಮ್ಮ ದುರ್ಭಾವನೆಗಳನ್ನು ಬೆಚ್ಚಗಾಗಿ ಕಾದುಕೊಂಡಿದ್ದಾರೆ. ಇಷ್ಟಾದ ಮೇಲೆ ನನ್ನಂಥವರು ಮಾಡುವುದಕ್ಕೇನೂ ಇಲ್ಲ. ಸಾಧ್ಯವಾದರೆ ತಿವಿಯುವುದು. ಇಲ್ಲವಾದರೆ ಪಲಾಯನ ಮಾಡುವುದು. ನಾನಲ್ಲಿಗೆ— ಬಾಳೂರರಲ್ಲಿಗೆ, ಹೋಗಿದ್ದಾಗ ಅಬ್ದುಲ್ಲನಂಥವನೊಬ್ಬನನ್ನು ಕಂಡೆ. ನನ್ನ ಹುಚ್ಚು ಮಮತೆ ಅಬ್ದುಲ್ಲನ ರೂಪವನ್ನು ಹೊಂದಿರಬಹುದು. ಮನಸ್ಸಿನೊಳಗೆ ಅಬ್ದುಲ್ಲನ ಚಿತ್ರವೊಂದೇ ಇರುವಾಗ ಕಂಡವರೆಲ್ಲಾ ಅಬ್ದುಲ್ಲರಾಗಿ ಕಾಣುತ್ತಿರುವುದು ಸೋಜಿಗವೇನೂ ಅಲ್ಲ. ಬಾಳೂರರ ಮಾತೇ ನಿಜವಿರಬಹುದು. ಸ್ವಧರ್ಮೀಯರ ಮಧ್ಯದಲ್ಲಿ ಎಂತಹ ಸ್ಥಿತಿಯಿದೆ ಎಂಬ ಅನುಭವ ನನಗಾಗಿದೆ. ಅಬ್ದುಲ್ಲನ ಧರ್ಮಬಂಧುಗಳ ಮಧ್ಯದಲ್ಲಿ ಎಂತಹ ಅಗ್ನಿಕುಂಡ ಉರಿಯುತ್ತಿದೆಯೊ? ಯಾರು ಬಲ್ಲರು? ನಾನು ಅವನನ್ನು ಕಾಣುವ ಹಾಗಿಲ್ಲ; ಅವನು ನನ್ನನ್ನು ಹುಡುಕಿ ಬರುವ ಹಾಗಿಲ್ಲ. ನಿರಪಾಯದ ಎಲ್ಲೆಯಿಂದತ್ತ ಕಾಲಿಡುವುದಕ್ಕೆ ನಾನು ಸಿದ್ಧನಾಗಿಲ್ಲ. ಅವನು ಹೇಗೆ ಸಿದ್ಧನಾಗಿದ್ದಾನು? ಅಥವಾ ಬಾಳೂರರು ಪ್ರತ್ಯಕ್ಷ ಜ್ಞಾನದಿಂದ ಹೇಳಿದುದು ಸತ್ಯವಾಗಿದ್ದರೆ ಆ ಅಬ್ದುಲ್ಲನಿಂದು ನರರೂಪದ ರಾಕ್ಷಸನಾಗಿಯೇ ಇರಬೇಕು. ಅವನ ತಳ್ಳಿ ನನಗೇಕೆ?

x x x x

ನಾನು ಬಾಳೂರರನ್ನು ಕಂಡುಬಂದ ಮರುದಿನವೇ ನಗರದ ಕೆಲ್ಲಭಾಗಗಳಲ್ಲಿ ಅವಾಂತರಗಳಾದುವಂತೆ. ಅಪಾಯ ಸ್ಥಳಗಳಿಂದ ಜನರು ಬಡಕಿತ್ತು ಹೋಗತೊಡಗಿದರು. ಒಂದು ಮೋಟಾರ್ ಬಂಡಿಯನ್ನೇರಿದ ಕೆಲ ಹತ್ಯಾಕಾರಿಗಳು ಉದ್ದಕ್ಕೂ ಗುಂಡು ಹಾರಿಸುತ್ತಾ ನಡೆದರೆಂದೂ ಹತ್ತೆಂಟು ಜನರನ್ನು ಕೊಂದರೆಂದೂ ನೂರಾರು ಜನರನ್ನು ಗಾಯಗೊಳಿಸಿದರೆಂದೂ ಕಾರನ್ನು ಎಲ್ಲಿಯೋ ಒಗೆದು ಮಹಾನಗರದ ಸಂದಣಿಯ ಮಧ್ಯದಲ್ಲಿ ತಲೆತಪ್ಪಿಸಿಕೊಂಡರೆಂದೂ ಸುದ್ದಿ ಹರಡಿತು. ರಕ್ತ ಕುದಿಸುವ ಸುದ್ದಿ. ಇವರಾರು? ಎಂದು ಕೇಳಬೇಕಾಗಿಲ್ಲ. ಹೇಳಬೇಕಾಗಿಲ್ಲ. ಒಂದು ಜಾತಿಯ ಜನರು—ಇನ್ನೊಂದು ಜಾತಿಯವರು, ಎಂದು ಸರಕಾರದವರು ಮರೆಮಾಜಲು ಯತ್ನಿಸಿದರು. ಈ ಪಾಪಿಗಳು ಹಿಂದುಗಳೆಂದು ಮುಸಲ್ಮಾನರಿಗೂ ಮುಸಲ್ಮಾನರೆಂದು ಹಿಂದುಗಳಿಗೂ ಖಂಡಿತವಾಗಿ ಗೊತ್ತಿತ್ತು. ತಪ್ಪು ನಮ್ಮದಲ್ಲ ಎಂಬುದು ಮನುಷ್ಯರ ಮೊದಲಿನ ಸಿದ್ಧಾಂತ. ಆ ಮೇಲೆ ಇತರರೇ ತಪ್ಪುಗಾರರೆಂದು ಹೇಳಬೇಕಾಗಿಲ್ಲ. ಇಂತಹ ಅಪರಾಧ ಮಾಡಿದವರಿಗೆ ಶಿಕ್ಷೆಯೇನೆಂಬುದೂ ವ್ಯವಹಾರ ನೀತಿಯಲ್ಲಿ ಬರೆದೇ ಇದೆ. ಅಲ್ಲಿ ಅವರು ಕೊಲೆಪಾತಕ ಮಾಡಿದರೆ ಇಲ್ಲಿ ನಾವು ಕೊಲೆ ಮಾಡಬೇಕೆಂಬುದು ಈ ಶಾಸ್ತ್ರಕ್ಕೆ ಸಮ್ಮತವೇ ಆಗಿದೆ.

ಮುಂದಿನ ದಿನಗಳು ಹೇಗೆ ಕಳೆದಾವೋ ನನಗೆ ಯೋಚನೆ ಹಿಡಿಯಿತು. ಜನರು ಓಡಾಟಕ್ಕೆ ತೊಡಗಿದ್ದಾರೆ. ಪೋಲೀಸರೂ ದಂಡಾಳುಗಳೂ ಸರ್ಪಗಾವಲನ್ನಿಟ್ಟಿದ್ದಾರೆ. ಅಪ್ಪಿತಪ್ಪಿ ಒಂದಡಿ ಅತ್ತಿತ್ತ ಇಟ್ಟರೆ ಅಪಾಯ. ಜೀವವನ್ನು ಉಳಿಸಿಕೊಳ್ಳಲು ಬಹಳ ಜಾಗ್ರತೆ ಬೇಕಾಗಿತ್ತು. ಯಾವುದರ ಬಗ್ಗೆ ನಾವು ಹೆಚ್ಚು ಶ್ರಮಪಡಬೇಕಾಗುತ್ತದೋ, ಅದು ಭಾರವಾಗಿಯೂ ತೋರುತ್ತದೆ. ಭಾರವಾದ ಒಡವೆಯೂ ಜಾಗ್ರತೆಯಿಲ್ಲದೆ ಹೊರಬಹುದಾಗಿದ್ದ ಪಕ್ಷದಲ್ಲಿ ಹಗುರವಾಗಿಯೇ ತೋರುತ್ತದೆ. ಪ್ರಾಣವನ್ನು ಶ್ರಮದಿಂದ ಹೊರಬೇಕಾಗಿದೆ. ಬೊಂಬಾಯಿಯಲ್ಲಿ ನಾನೀಗ ಇರುವುದು ಅವಶ್ಯವಾಗಿರಲಿಲ್ಲ. ಇಲ್ಲದಿರಲು ಉಪಾಯವಿಲ್ಲ. ಹೋಗುವ ದಾರಿ ಕಟ್ಟಿ ಹೋಗಿದೆ. ಉಗಿಬಂಡಿಯಲ್ಲಿ ಸ್ಥಳವಿಲ್ಲ; ಬೇರೆ ಮಾರ್ಗವಿಲ್ಲ. ಜೀವವು ಸಿಡಿಯುತ್ತಿತ್ತು. ಕೀಯುತ್ತಿದ್ದ ಬೀಗಿನಂತೆ ಸಿಡಿಯುತ್ತಿತ್ತು. ಬೊಂಬಾಯಿಯನ್ನು ಹೇಗೂ ಬಿಡುತ್ತೇನೆ. ಬಿಡುವ ವರೆಗೆ ತಾಯಿಯ ಒಡವೆಯಾದ ನನ್ನೀ ಪ್ರಾಣವನ್ನು ಹೇಗಾದರೂ ಕಾಪಾಡುತ್ತೇನೆ ಎಂದು ಕೋಣೆಯಿಂದ ಹೊಟೇಲಿಗೂ ಹೊಟೇಲಿನಿಂದ ಕೋಣೆಗೂ ಮಾತ್ರ ಸುಳಿದಾಡಿ, ಉಳಿದ

ವೇಳೆಯನ್ನು ಬಾಗಿಲು ಬಲಿತ ಕೋಣೆಯೊಳಗೆ ಕಳೆಯುತ್ತಿದ್ದೆ. ನಿರುದ್ಯೋಗದ ದಿನ. ಇಡೀ ಹೊತ್ತನ್ನು ಹೇಗೆ ಕಳೆಯುವುದಕ್ಕಾಗುತ್ತದೆ? ಮೌನವಾಗಿ ಕುಳಿತು ಆಲೋಚಿಸುತ್ತಲೂ ವ್ಯಥೆಯ ಭಾರವನ್ನು ಹೆಚ್ಚಿಸುತ್ತಲೂ ಇದ್ದೆ. ಈ ವ್ಯಥೆಯಲ್ಲಿ ಅಬ್ದುಲ್ಲನಿಗೆ ಒಂದು ಪಾಲು ದೊರೆಯದಿರುತ್ತಿರಲಿಲ್ಲ. ಅಬ್ದುಲ್ಲ ಬಂದಿದ್ದರೆ ಚೆನ್ನಾಗಿತ್ತು; ಕಂಡಿದ್ದರೆ ಚೆನ್ನಾಗಿತ್ತು. ಆದರೆ ಇದೆಲ್ಲ ಅಸಂಭವ; ಎಲ್ಲಿ ಸತ್ತನೋ, ಏನಾದನೋ ಯಾರು ಬಲ್ಲರು? ಆತ್ಮರಕ್ಷಣೆಯೊಂದೇ ಸದ್ಯದ ಕರ್ತವ್ಯ. ಸ್ವಾರ್ಥವು ಬಲಿಯಿತು. ಮನಸ್ಸು ಕಗ್ಗಲ್ಲ ಕೋಟೆಯಾಯಿತು. ವಜ್ರದ ಗೋಡೆಯಾಯಿತು. ಅದರೊಳಗೆ ಜೀವವು ಭದ್ರವಾಗಿ ಕುಳಿತಿತ್ತು!

ಸಾಯಂಕಾಲ ಘಂಟೆ ಎಂಟಾಗಿದೆ. ಹೊಟೇಲಿನಲ್ಲಿ ಊಟ ತೀರಿಸಿ ಕೋಣೆಯ ಕಡೆಗೆ ಹೆಜ್ಜೆಹಾಕುತ್ತಿದ್ದೆ. ಸುತ್ತುಮುತ್ತಲೂ ಕಣ್ಣುಹಾಯಿಸುತ್ತಾ ಯಾರಾದರೂ ಬರುವರೇ? ಏನಾದರೂ ಆಗುವುದೇ? ಎಂದು ಪರೀಕ್ಷಿಸುತ್ತಾ ಹೋಗುತ್ತಿದ್ದೆ. ಕಣ್ಣಳತೆಯ ವಿಸ್ತಾರದಲ್ಲಿ ದೃಷ್ಟಿಯನ್ನಿಟ್ಟು ಶೋಧಿಸುತ್ತಲೇ ಇದ್ದೆ. ಚೂರಿಯೊಂದು ಸದಾ ಜೇಬಿನೊಳಗಿತ್ತು ನನ್ನ ಅಂಗರಕ್ಷಣೆಗಾಗಿ. ಬೀದಿಯ ಎರಡೂ ಕಡೆಗಳಲ್ಲಿ ಎತ್ತರ ಕಟ್ಟಡಗಳು. ವಿದ್ಯುಚ್ಛಕ್ತಿಯ ದೀಪ ಬೆಳಗುತ್ತಿದ್ದರೂ, ಅಲ್ಲಲ್ಲಿ ದಟ್ಟವಾದ ನೆರಳೂ ಬೀಳುತ್ತಿತ್ತು. ಜನರ ಓಡಾಟವೂ ಇತ್ತು. ಗುಂಪಾಗಿ ಹೋಗುವವರ ಮಧ್ಯದಲ್ಲಿ, ಬರುವವರ ಮಧ್ಯದಲ್ಲಿ ಮೃತ್ಯುವೇಕೆ ಅವಿತಿರಬಾರದು? ನಾನು ಬಲು ಎಚ್ಚರದಿಂದ, ಜನರ ಗುಂಪನ್ನು ದೂರವೇ ಬಿಟ್ಟು ಆದಷ್ಟು ತ್ವರಿತವಾಗಿ ಕೋಣೆಯ ಕಡೆಗೆ ಬರುತ್ತಿದ್ದೆ. ಇನ್ನೂರು ಗಜ ಬಂದೆನೋ ಇಲ್ಲವೊ! ರಸ್ತೆಯ ಪಕ್ಕದಲ್ಲಿದ್ದ ಒಂದು ಚಿಕ್ಕ ಮರದಡಿಯ ನೆರಳಿನಿಂದ ಇನ್ನೊಂದು ನೆರಳು ಒಡೆದು ಬೇರಾಗಿ ಚಲಿಸುವ ಹಾಗೆ ತೋರಿತು. ಚಲಿಸಿದುದು ಮಾತ್ರವಲ್ಲ; ನನ್ನ ಕಡೆಗೇ ಚಲಿಸುವಂತಿತ್ತು. ಕೂಲಂಕಷ ವಿಚಾರಿಸುವ ಅವಶ್ಯತೆಯೇನು? ಕಾಲಿನ ವೇಗವನ್ನು ಹೆಚ್ಚಿಸಿದರಾಯಿತು; ಹೆಚ್ಚಿಸಿದೆ. ಅದರ ವೇಗವೂ ಹೆಚ್ಚಿತು. ಆ ನೆರಳಿನ ಕೆಲ ಬಲಗಳಲ್ಲಿ ಜನರು ಹೋಗುವುದೂ ಬರುವುದೂ ತೋರುತ್ತಿತ್ತು. ಆದರೆ ಈ ನೆರಳು ಮಾತ್ರ ನನ್ನ ವೇಗದೊಡನೆ ವೇಗ ಹೆಚ್ಚಿಸುವುದಷ್ಟೆ? ಸೂಜಿಕಲ್ಲಿನ ಹಿಂದೆ ಬರುವ ಕಬ್ಬಿಣದಂತೆ ನನ್ನನ್ನೇ ಬೆಂಬತ್ತಿಬರುವುದಷ್ಟೆ! ಇದೇನು ಸೋಜಿಗ? ಅಪಾಯವನ್ನು ಶಂಕಿಸಲೇ? ಬೊಬ್ಬೆ ಹೊಡೆಯಲೇ? ಅವಿವೇಕವಾದೀತು. ಅಕಾರಣವಾಗಿ ಗಲಭೆಯೆದ್ದು, ರಕ್ತಪಾತ

ವಾಗುವ ಕಾಲವಿದು. ನನ್ನದು ಮಾನಸಿಕ ಭ್ರಾಂತಿಯಾಗಿರಲೂ ಬಹುದು; ಅಥವಾ ದೃಷ್ಟಿಭ್ರಮೆಯಾಗಿರಲೂ ಬಹುದು. ಬೊಬ್ಬೆಯೆಬ್ಬಿಸಿ ಅನಾಹುತ ವನ್ನು ಕರೆತರುವುದೇಕೆ? ಕಾಲುಗಳ ಮೇಲೆ ಅಂಕೆಯಿರುವಷ್ಟು ಕಾಲ ಅವುಗಳ ಮೇಲೆ ನಿರಂಕುಶಾಧಿಕಾರವನ್ನು ಪ್ರಯೋಗಿಸಿದರಾಯಿತು. ಓಡೋಣವೇ? ಚೆನ್ನಾಗಿಲ್ಲ. ದಾರಿಹೋಕರು ಏನೆಂದು ಭಾವಿಸಬಹುದು? ಓಡದಿರಲೇ? ಆ ನೆರಳು ನಮ್ಮಿಬ್ಬರ ನಡುವಣ ದೂರವನ್ನು ನುಂಗುತ್ತಾ ಬರುತ್ತಿದೆ. ಏನೂ ಆಗಲಿ, ಇಡುವ ಹೆಜ್ಜೆಗಳನ್ನೇ ದೂರದೂರವಾಗಿ ಇಡೋಣ . . . . ಎಂದು ಇಟ್ಟೆ . . . . . ಆ ನೆರಳೂ ಹಾಗೆಯೇ ಮಾಡಿದಂತೆ ತೋರಿತು. ಖಂಡಿತ ವಾಗಿ ಅಪಾಯವಿದೆ . . . . . ಅದೂ ನನಗೊಬ್ಬನಿಗೇ ಅಪಾಯ! ಆದ ರೇನು? ಕೋಣೆ ಸಮೀಪಿಸಿತು . . . . . ನಾಲ್ಕೇ ನೆಗೆತ! ನಮ್ಮ ಕಟ್ಟಡದ ಬುಡಕ್ಕೇ ಹಾರಬಹುದಷ್ಟೆ? ಹಾಗೆಯೇ ಮಾಡಿದೆ.

ನಾನಿರುವ ಕಟ್ಟಡ ಭಾರಿ ದೊಡ್ಡದು. ಅದರೊಳಗೆ ನೂರಾರು ಸಂಸಾರಗಳ ಚಿಕ್ಕ ಪ್ರಪಂಚವಿದೆ. ಒಬ್ಬರಿಗೊಬ್ಬರ ಮುಖಪರಿಚಯವೂ ಕಡಿಮೆ. ಮಾತುನಡೆವಳಿಗಳು ಬೇರಾಗಿದ್ದರೆ ಮತ್ತೆ ಹೇಳಬೇಕೆ? ನಮಗೆ ನಮ್ಮ ಕೋಣೆಗಳ ಬೀಗದ ಕೈಗಳ ಪರಿಚಯ ಇರುವಷ್ಟು ಜನರ ಪರಿಚಯ ವಿರುವುದಿಲ್ಲ. ನನ್ನ ಕೋಣೆ ಆರನೆಯ ನೆಲೆಯಲ್ಲಿ. ಏರುವುದಕ್ಕೆ ಡೊಂಕು ಡೊಂಕಾಗಿ ಸುತ್ತುವ ಸೋಪಾನ. ರಸ್ತೆಯ ಅಂಚಿನಿಂದ ತಟ್ಟನೆ ಸೋಪಾ ನಕ್ಕೇ ಹಾರಿದೆ. ಹತ್ತು ಮೆಟ್ಟು ಮೇಲೇರಿ ಕೆಳಗೆ ನೋಡುತ್ತೇನೆ. ಆ ನೆರಳು ನನ್ನ ಕೆಳಗಡೆಯ ರಸ್ತೆಯಲ್ಲಿ ನಿಂತಂತಿದೆ. ಇನ್ನೇನು? ಸಂದೇಹ ಬೇಕಾಗಿಯೇ ಇಲ್ಲ. ನನ್ನನ್ನೇ ಓಡಿಸಿಕೊಂಡು ಬಂದಿದೆ ವಿಪತ್ತು. ಮೈ ನಡುಗಿತು; ಬಾಯಿ ಚೀರಿತು; ನನ್ನ ಕೈ ತಾನಾಗಿ ಜೇಬಿನೊಳಗಿದ್ದ ಚೂರಿ ಯನ್ನು ಬಿಚ್ಚಿ ನನ್ನನ್ನು ಅನುಸರಿಸುತ್ತಿದ್ದ ನೆರಳಿನ ಕಡೆಗೆ ಎಸೆಯಿತು. ಚೂರಿ ರಸ್ತೆಗೆ ಬಿದ್ದಿತು. ಠಣ್ ಎಂಬ ಸದ್ದಾಯಿತು. ನನ್ನ ಚೀರಾಟ . . . . ಚೂರಿಯ ಠಣತ್ಕಾರ . . . . ಇಲ್ಲಿ ಏನೋ ದೊಡ್ಡ ದೊಂಬಿಯಾಗುತ್ತಿದೆ . . . ಎಂದು ರಸ್ತೆಯಲ್ಲಿ ಹೋಗುತ್ತಿದ್ದವರೂ, ಮನೆಯ ಒಳಗಿದ್ದವರೂ, ಹೊರಗಿ ದ್ದವರೂ ಎಲ್ಲರೂ ಒಂದಾಗಿ ದಿಗಿಲೆಬ್ಬಿಸಿದರು. ನೆರಳು ಓಡಿತು. ಹತ್ತೆಂಟು ಜನರೂ ಓಡಿದರು. ಹೊಡೆಯಿರೋ, ಬಡಿಯಿರೋ ಎಂಬ ಆರ್ಭಟೆ. ಮೇಲಿನವರು, ಕೆಳಗಿನವರು, ಆ ಕಡೆಯವರು, ಈ ಕಡೆಯವರು, ಎಲ್ಲರೂ ಕೂಡಿ, ಓಡುವ ವ್ಯಕ್ತಿಯ ಹಿಂದೆ, ಅದನ್ನು ಬೆಂಬತ್ತುವ ಜನರ ಹಿಂದೆ, ಓಡ

ತೊಡಗಿವರು. ಯಾರು, ಏನು? ಎಂದು ವಿಚಾರಿಸುವುದಕ್ಕೆ ಯಾರಿಗೂ ಅವಕಾಶವಿಲ್ಲ. ಬೊಬ್ಬೆಯ ಹಿಂದೆ ಜನರು! ಜನರ ಹಿಂದೆ ಬೊಬ್ಬೆ! ಜೀವವಿದ್ದ ಆ ನೆರಳು ಏನಾಯಿತೋ, ಎಲ್ಲಿಗೆ ಹೋಯಿತೋ ನಾನರಿಯೆ. ಕೆಲವೇ ನಿಮಿಷಗಳಲ್ಲಿ ಬೊಬ್ಬೆ ನನ್ನ ಕಿವಿಗೆ ಕೇಳದಷ್ಟು ದೂರಕ್ಕೆ ಹೋಗಿಬಿಟ್ಟಿತು. ನನಗೆ ಧೈರ್ಯಬಂತು. ಅಲ್ಲಿ ಏನಾಯಿತೋ ತಿಳಿಯುವ ಕುತೂಹಲವಿರಲಿಲ್ಲ. ನಾಳೆ ಬೆಳಗಾಗುವುದಿಲ್ಲವೆ? ಸಾವಕಾಶವಾಗಿ ತಿಳಿಯಬಹುದು; ಆ ರಾತ್ರಿ ನನ್ನದಾದರೆ, ಉಳಿದ ಹಗಲುರಾತ್ರಿಗಳೆಲ್ಲ ನನ್ನವು ಎಂಬ ಭಾವನೆಯಿಂದ ಕೋಣೆಯೊಳಗೆ ಭದ್ರವಾಗಿ ಕುಳಿತೆ.

ಬೆಳಗ್ಗೆ ನನ್ನ ಕೂಡೊಕ್ಕಲುಗಳಾಗಲಿ, ಬೀದಿಯಲ್ಲಿ ಸಂಚರಿಸುವ ಜನರಾಗಲಿ ಹೆಚ್ಚಿನ ವಾರ್ತೆಯನ್ನು ಹೇಳಲಿಲ್ಲ. ರಾತ್ರಿಯಲ್ಲಿ ಒಬ್ಬ ಕೊಲೆಪಾತಕಿ ಹೊಂಚುಹಾಕುತ್ತಾ ಬಂದ. ಅವನನ್ನು ಹತ್ತು ಜನ ಅಟ್ಟಿಕೊಂಡು ಹೋದರು. ನಾವಿರುವ ರಸ್ತೆ ರಾಜರಸ್ತೆಗೆ ಸೇರುವಲ್ಲಿ ಚಿಕ್ಕ ಮುಟ್ಟಿನ ಹೊಡೆದಾಟವಾಯಿತು. ಒಂದೆರಡು ಹೆಣಗಳು ಬಿದ್ದಿರಬಹುದು. ದೊಡ್ಡ ಮಾತಲ್ಲ. ಈಗ ಎಲ್ಲ ಶಾಂತವಾಗಿದೆ ಎಂದು ಯಾರೋ ಒಬ್ಬರು ಹೇಳಿದರು. ನನಗೆ ಅಷ್ಟರಿಂದ ತೃಪ್ತಿಯಿಲ್ಲ. ಈ ಚಿಕ್ಕ ಘಟನೆಯಲ್ಲಿ ನನಗೂ ಒಂದು ಸ್ಥಾನವಿದೆ. ಯಾವುದೋ ಒಂದು ನೆರಳು ನನ್ನನ್ನು ಓಡಿಸಿಬಂದುದರ ಪರಿಣಾಮವಾಗಿಯೇ ಈ ಕೊಲೆಯಾದುದಾಗಿರಲಾರದೆ? ಸತ್ಯಸಂಗತಿ ಏನೆಂದು ತಿಳಿಯಲೇಬೇಕು. "ಕಳೆದ ರಾತ್ರಿ ನಗರವು ಸಾಮಾನ್ಯತಃ ಶಾಂತವಾಗಿತ್ತು. ಮೂಲೆ ಮುಡುರುಗಳಲ್ಲಿ ನಾಲ್ಕಾರು ಇರಿತಗಳಲ್ಲದೆ, ಬೇರೆ ಯಾವ ಅವಾಂತರಗಳೂ ಆಗಿರಲಿಲ್ಲ. ಈ ನಾಲ್ಕು ದಿನಗಳಲ್ಲಿ ಇಂತಹ ಶಾಂತರಾತ್ರಿಯ ಅನುಭವ ಇದೇ ಮೊದಲು"—ಎಂದು ಸರಕಾರದವರು ಪ್ರಕಟನೆ ಕೊಟ್ಟಿದ್ದರು. ರಾತ್ರಿಯಲ್ಲಿ ಶಾಂತಿಯಿದ್ದಿರಬಹುದು; ನನ್ನ ಮನಸ್ಸಿನಲ್ಲಿರಲಿಲ್ಲ. ಸುದ್ದಿಯ ಮೂಲವನ್ನು ಹುಡುಕಬೇಕಾಗಿತ್ತು. ಅದು ನನ್ನೆಡೆಗೆ ಬರುವ ಹಾಗಿಲ್ಲ. ನಾನು ಅದರೆಡೆಗೆ ಹೇಗೆ ಹೋಗಲಿ? ಆಲೋಚನೆಗಳ ಎಳೆದಾಟದಲ್ಲಿಯೇ ಸಮಯ ಕಳೆದುಹೋಯಿತು. ಪಕ್ಕದ ಚಹದ ಅಂಗಡಿಗೆ ಹೋಗಿ ಒಂದು ಲೋಟ ತೆಗೆದುಕೊಂಡು, ನನ್ನ ಕೋಣೆಗೆ ಏರುತ್ತೇನೆ. ಕೆಳಗೆ ರಸ್ತೆಯ ಮೇಲೆ ನಿಂತ ಕಾರಿನಿಂದ ಪಿಂಗಾಣಿಯ ವ್ಯಾಪಾರಿ ಬಾಳೂರರು ಇಳಿದು ನನ್ನೆಡೆಗೆ ಮುಖ ತಿರುಗಿಸಿ, ಕೈಯನ್ನೆತ್ತಿ ಸನ್ನೆಮಾಡುತ್ತಾರೆ!

ನನಗಾದ ಸಂತೋಷ ಅಷ್ಟಿಷ್ಟೆಂದು ಹೇಳುವ ಹಾಗಿರಲಿಲ್ಲ. ಕೂಡಲೆ

ಕೆಳಕ್ಕೆ ನೆಗೆದು "ಬನ್ನಿ ನಾರ್ಣಪ್ಪಯ . . . ಬನ್ನಿ . . . ನನ್ನ ಗೂಡನ್ನು ಒಮ್ಮೆಯೂ ನೋಡಿದವರಲ್ಲ . . ." ಎಂದು ಕರೆದೆ.

"ನೀವು ಕರೆಯದಿದ್ದರೂ ನಾನು ಬರುತ್ತೇನೆ. ಹತ್ತಿ ಮೇಲೆ, ನಾನೂ ಬರುತ್ತೇನೆ" ಎಂದವರು ನನ್ನನ್ನೇ ಹಿಂಬಾಲಿಸಿದರು.

ನನ್ನ ಕೋಣೆಯಲ್ಲಿರುವುದು ಚೆಲುವಾದ ಕುರ್ಚಿ ಒಂದೆ. ಅದನ್ನು ಬಾಳೂರರು ಅಲಂಕರಿಸಿದರು. ರಾತ್ರಿ ನನ್ನ ಮಂಚವಾಗಿ ರೂಪಾಂತರ ಹೊಂದುತ್ತಿದ್ದ ಅಗಲ ಬೆಂಚಿನ ಮೇಲೆ ನಾನು ಕುಳಿತೆ. ಬಾಳೂರರು ಕರ ವಸ್ತ್ರದಿಂದ ಮುಖವೊರಸುತ್ತಾ "ನಿನ್ನೆಯ ಸಮಾಚಾರವೇನಾದರೂ ಗೊತ್ತೆ?" ಎಂದು ಪ್ರಶ್ನಿಸಿದರು.

"ಯಾವ ಸಮಾಚಾರ?"

"ಸಮಾಚಾರವು ಯಾವುದೆಂದೇ ಗೊತ್ತಿಲ್ಲದ ಮೇಲೆ ಕೇಳಬೇಕಾದು ದಿಲ್ಲ" ಎಂದವರು ನಕ್ಕರು.

"ಯಾವುದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಹೇಳಿದ್ದೀರಿ?"

"ನಿಮ್ಮ ಈ ಕಿರಿಬೀದಿ ರಾಜರಸ್ತೆಗೆ ಸೇರುವಲ್ಲಿ . . . ಆ ಮೂಲೆ ಯಲ್ಲಿ . . . ನಿನ್ನೆ ರಾತ್ರಿ ಏನಾಯಿತೆಂದು ಬಲ್ಲಿರಾ?

"ಒಂದೂ ಇಲ್ಲ!"

"ಎಂಟು ಗಂಟೆಗೇ ಕುಂಭಕರ್ಣ ನಿದ್ರೆಯೆ?"

"ಹೂಂ. ಬೊಂಬಾಯಿ ನಗರದಲ್ಲಿ—ನನ್ನಂತೆ ನಿದ್ದೆ ಮಾಡುವವರು ಹೆಚ್ಚು ಮಂದಿ ಇದ್ದರೆ ಈ ಮಾರಾಮಾರಿ ಕಡಿಮೆಯಾಗಬಹುದಲ್ಲವೆ?" ಎಂದು ನಗುತ್ತಾ ಉತ್ತರ ಕೊಟ್ಟೆ. ರಸ್ತೆಯಲ್ಲಾದ ಘಟನೆಯ ಕೂಲಂಕಷ ವೃತ್ತಾಂತವನ್ನು ತಿಳಿಯಬೇಕೆಂಬ ಕುತೂಹಲವು ಆ ನಗೆಯಿಂದ ಇಣಿಕಿ ನೋಡುತ್ತಿತ್ತು. ಆದರೆ ಆದುದಕ್ಕೂ ನನಗೂ ಒಂದಿಷ್ಟು ಸಂಬಂಧ ಇದೆ ಯೆಂದು ತಿಳಿಸುವುದಕ್ಕೆ ನಾನು ಸಿದ್ಧನಾಗಿರಲಿಲ್ಲ.

"ಹಾಗೆಯೇ ಸರಿ. ನಿಮ್ಮಂಥವರೇ ಈ ನಗರದಲ್ಲಿ ಇರುವುದಾಗಿದ್ದರೆ ಆಳುವ ಸರಕಾರಬೇಕೆ? ಆದುದನ್ನು ತಿಳಿಸಿಬಿಡುತ್ತೇನೆ. ನಿನ್ನೆ ರಾತ್ರಿ ಪುಕಾರಿ ಮಾಡಿದಂತಹ ದುರ್ಜನರನ್ನು ಹುಟ್ಟಡಗಿಸುವುದಕ್ಕಾಗಿಯೇ ನಮಗೊಂದು ಸರಕಾರಬೇಕಾದುದು." ಎಂದು ಪ್ರಸ್ತಾಪಿಸುತ್ತಾ ಹೀಗೆ ವಿವರಿಸಿದರು.

"ಯಾರೋ ಒಬ್ಬ ದುಷ್ಟ ಈ ವಠಾರದಲ್ಲಿ ಹೊಂಚುಹಾಕುತ್ತಿದ್ದ. ಈ ಸೋಗು ಯಾರಿಗೊ ತಿಳಿಯಿತು. ಅವರು ಸನ್ನೆಕೊಟ್ಟರು. ಹೋಗುತ್ತಿದ್ದ ದಾರಿ ಹೋಕರಿಗೆ ಗೊತ್ತಾಯಿತು. ಎಲ್ಲರೂ ಅಟ್ಟಿಕೊಂಡು ಬಂದರು. ಪ್ರಾಣವನ್ನು ಕೈಯಲ್ಲಿಟ್ಟುಕೊಂಡು ಓಡಿತು ಆ ಪ್ರಾಣಿ. ಈ ರಸ್ತೆ—ಆ ರಸ್ತೆಗಳ ಸಂದಿನಲ್ಲಿ ಜನ ನಿಂತಿದ್ದಿರಬೇಕು. ತಡೆದರು. ಹಿಡಿದರು. ಆ ಜನ ಕೈಯಲ್ಲಿದ್ದ ಕತ್ತಿಯಿಂದ ಒಬ್ಬನನ್ನು ತಿವಿದ. ಮತ್ತೆ ಕೇಳುವುದೇನು? ನಿರಪರಾಧಿಯ ರಕ್ತವಲ್ಲವೇ? ಅದು ನೀರೆ? ಆತನ ಕೊರಳನ್ನು ಕೊಯಿದು ಅಲ್ಲೆ ಎಸೆದಿರಬೇಕು."

"ನಮ್ಮ ನೆರೆಗೂ ಈ ಮಾರಿ ಬಂತು!" ಎಂದು ಏನೂ ತಿಳಿಯದವನಂತೆ ಮುಖವನ್ನು ಮುದುಡಿಸಿದೆ.

"ಎಲ್ಲ ಆಗುವುದೇ . . . . . ಆಗತಕ್ಕುದೇ . . . . . ನಿನ್ನಂತಹ ಅಂಜುಬುರುಕರಿಗೆ ಈ ಪ್ರಪಂಚವಲ್ಲ!" ಎಂದು ಹೆಮ್ಮೆಯಿಂದಾಡುತ್ತಾ ಮತ್ತೂ ಮುಂದುವರಿಸಿದರು:

"ನಿಮಗೆ ತಿಳಿಸಬೇಕಾದುದು ಇದಲ್ಲ. ಕಥೆಯೊಳಗೆ ಒಂದು ಉಪಕಥೆಯಿದೆ. ನನ್ನ ಮಂಡಿಯ ಸಮೀಪದಲ್ಲಿ ಒಂದು ಆಸ್ಪತ್ರೆಯಿದೆ ಗೊತ್ತೊ?"

"ಇರಬಹುದು"

"ಇದೆ; ಅಲ್ಲೊಂದು ಅನಾಥ ಶವವಿದೆ!" ಈ ಮಾತನ್ನು ಕೇಳಿದಾಗ ನೆತ್ತರು ಬಿಸಿಯೇರತೊಡಗಿತು.

"ಅನಾಥ ಶವ!"

"ಹೌದು"

"ನಾವದರ ಸಂಸ್ಕಾರ ಮಾಡಬೇಕಾಗಿರುವುದೇ?"

"ಆ ಕೆಲಸವನ್ನು ನಮಗೆ ಯಾರು ಕೊಡುತ್ತಾರೆ? ಕೊಟ್ಟರೆ ಮಾಡುವ ಬೊಡ್ಡಿ ಮಗ ಯಾರು? ಆದದ್ದೇನೋ ಚೆನ್ನಾಯಿತು. ಆದರೆ ಹೆಣ ಯಾರದೆಂದು ಗೊತ್ತಾಗಲಿಲ್ಲ ಪೋಲೀಸರಿಗೆ . . ಸಾಧ್ಯವಾದರೆ ಗುರುತಿಸಬೇಕಾಗಿದೆ!"

"ನಾನು ಶವ ಪರೀಕ್ಷೆಯಲ್ಲಿ ನಿಪುಣನಲ್ಲ!"

"ಲೋಕಕ್ಕೇ ಗೊತ್ತಿದೆ ಈ ವಿಷಯ. ಆ ಹೆಣಕ್ಕೆ ನಿನಗೆ ಪರಿಚಿತವಾದ ಹೆಸರಿದೆ!"

"ನನಗೆ ಪರಿಚಿತವಾದ ಹೆಸರು!"

"ಹೌದು; ಸೊಂಟದಲ್ಲಿ ಬಿಗಿದಿದ್ದ ಜಟ್ಟಿಯಲ್ಲಿ ಅಬ್ದುಲ್ಲ—ಎಂದು ಬರೆದಿತ್ತು!"

"ಏನು ಅಬ್ದುಲ್ಲ!" ಎಂದು ಬೆಚ್ಚಿ ಬಿದ್ದೆ.

"ಏಕಿರ ಬಾರದು? ಆ ಹೆಸರಿನಲ್ಲಿ ಏನಿದೆ? ನಾರ್ಣಪ್ಪಯ್ಯ ಎಂಬ ಹೆಸರಿನಲ್ಲಿ ಏನಿದೆಯೋ ಅಷ್ಟೆ ಅದರಲ್ಲಿಯೂ! ಸರಕಾರದವರಿಗೆ ಈ ಹೆಣದ ತುದಿಬುಡ ತಿಳಿದಿಲ್ಲ. ದಾಖಲೆಗೆ ಇದು ಬೇಕಾಗಿದೆಯಂತೆ. ಹಿಂದು ವೇಷ ಹಾಕಿಕೊಂಡು ಬಿದ್ದಿತ್ತಂತೆ ಆ ಹೆಣ. ಪೋಲೀಸರು ತಂದು ನೋಡುತ್ತಾರೆ . . ಏನು ಹೇಳೋಣ . . ಆ ಮುಂಡಾಸು . . ಕಚ್ಚೆ . . ಶಾಲು . . ಇವುಗಳೊಳಗೆ ಶುದ್ಧ ಮುಸಲ್ಮಾನನ ಶರೀರ . . ನಾನು ಆಗಲೇ ಹೇಳಿರಲಿಲ್ಲವೆ? ಈ ದುಷ್ಟರು ಮಾಡುವುದೇ ಹೀಗೆ . . ವೇಷ ಬದಲಾಯಿಸಿ ಕೊಲೆಮಾಡುವುದು."

ಬಾಳೂರರ ಮುಂದಿನ ವಾಕ್ಯಗಳನ್ನು ಕೇಳುವ ತವಕ ನನ್ನಲ್ಲಿರಲಿಲ್ಲ. ಹೇಳುವ ತವಕ ಅವರಿಗಿತ್ತೆಂಬುದು ಸ್ಪಷ್ಟ. ಆ ಜಾತಿಯನ್ನು ಅವರು ಮನವಾರೆ ಬೈದರು. ಎಷ್ಟು ಅಪಶಬ್ದಗಳನ್ನಾಡಬಹುದೋ ಅಷ್ಟನ್ನೂ ಆಡಿದರು. ಆ ಅಬ್ದುಲ್ಲ ಕೆರೆಕೋಡಿ ಅಬ್ದುಲ್ಲನಾಗಿರಬಹುದೇ? ಎಂಬುದನ್ನು ಶೋಧಿಸುವುದಕ್ಕಾಗಿ ನನ್ನನ್ನು ಬರಹೇಳಿದುದೆಂಬುದು ಸ್ಪಷ್ಟವಾಯಿತು. ಕರೆಯದಿದ್ದರೂ ನಾನು ಹೋಗುತ್ತಿದ್ದೆ. ನನಗೆ ಆ ಹೆಸರು ಅಷ್ಟು ಮೋಹಕ! ಮತ್ತೆಲ್ಲಿ ಹುಡುಕಿದರೂ ಇಲ್ಲ. ಆ ಹೆಣದೊಳಗಾದರೂ ಅಬ್ದುಲ್ಲ ಕುಳಿತಿರುವನೋ ನೋಡೋಣ ಎಂದು ಅವರ ಕಾರಿನಲ್ಲಿಯೇ ಆಸ್ಪತ್ರೆಗೆ ಹೋದೆ. ಬಾಳೂರರು ಜೊತೆಯಲ್ಲಿದ್ದರು.

ಹೆಣ ಸ್ಮಶಾನಕ್ಕೆ ಹೊರಡಲು ಸಿದ್ಧವಾಗಿತ್ತು. ಹೆಚ್ಚು ಪರೀಕ್ಷಿಸಬೇಕಾಗಿರಲಿಲ್ಲ. ಅದೇ ಮುಖ; ಅದೇ ಮೈಕಟ್ಟು, ಹಿಂದೆ ಇದ್ದ ಕಿರುಮೀಸೆಯ ಸ್ಥಾನದಲ್ಲಿ ದಪ್ಪ ಮೀಸೆ. ನುಣುಪಾಗಿದ್ದ ಮೈ ಒರಟಾಗಿ ಸ್ಥೂಲವಾಗಿತ್ತು. ಬಣ್ಣದಲ್ಲಿ ಸ್ವಲ್ಪ ಕಂದಿಹೋಗಿದ್ದ. "ಏನೂ ಮಾಡಿಯೇನು! ಎಲ್ಲಿಗೂ ಹೋದೇನು!" ಎನ್ನುವ ನಿರ್ಭೀತಿಯ ಮುಖ ಮುದ್ರೆ ಈಗಲೂ ಇತ್ತು. ಏನೋ ಮಾಡಿದ; ಮಸಣಕ್ಕೆ ನಡೆದ. ಪಾತುಮ್ಮನ ಕನಸಿನ ದೈವ ಅಲ್ಲಿ ಬಿದ್ದಿತ್ತು. ಕುತ್ತಿಗೆ ಅರ್ಧ ಕತ್ತರಿಸಿ ಹೋಗಿತ್ತು. ಸುರಿದ ರಕ್ತ ಇನ್ನೂ ಆರಿರಲಿಲ್ಲ. ರಕ್ತದ ದಾರಿಯಲ್ಲಿಯೇ ಜೀವ ತಪ್ಪಿಸಿಕೊಂಡು ಹೋಗಿತ್ತು.

"ರಾಮಣ್ಣ! ನಿನ್ನ ತಮ್ಮನನ್ನು ಮರೆಯ ಬೇಡ!" ಎಂದು ಎಂಟು ವರ್ಷಗಳ ಹಿಂದೆ ಪಾತುಮ್ಮನಾಡಿದ್ದ ಕಣ್ಣೀರಿನ ಮಾತುಗಳು ಕಿವಿಯಲ್ಲಿ ರಣರಣಿಸುತ್ತಿದ್ದುವು. ನಾನು ಮರೆತೆನೇ? ಇಲ್ಲ. ಅಬ್ದುಲ್ಲ ಈ ಪ್ರಪಂಚವನ್ನು ಬಿಟ್ಟು ಹೋದಾಗ ಹೋದ ಜನ ಯಾರೆಂದು ಗುರುತಿಸುವುದಕ್ಕೆ ರಾಮಣ್ಣನೇ ಬರಬೇಕಾಯಿತು. ಕನ್ನಡ ಜಿಲ್ಲೆಯ ಮಣ್ಣು ಬೊಂಬಾಯಿಯ ಮಣ್ಣನ್ನು ಕೂಡಿತು. ಇದು ಕನ್ನಡದ ಮಣ್ಣೆನ್ನುವುದಕ್ಕೆ ರಾಮಣ್ಣನೇ ಸಾಕ್ಷ್ಯ ಕೊಡಬೇಕಾಯಿತು.

ಅಲ್ಲಿದ್ದ ಅಧಿಕಾರಿಗಳು "ಈತನ ಪರಿಚಯವಿದೆಯೇ" ಎಂದು ಕೇಳಿದರು.

"ಇದೆ; ಈತನೇ ಕೆರೆಕೋಡಿ ಅಬ್ದುಲ್ಲ;"

"ತಂದೆಯ ಹೆಸರು?"

"ಮೋಯಿದ್ದಿನ್"

"ಕಸಬು!"

"ಇಲ್ಲಿಯೇ ಏನೋ ಮಾಡುತ್ತಿದ್ದ!"

"ಉತ್ತರಾಧಿಕಾರಿಗಳು?"

"ಪಾತುಮ್ಮ. . . . ತಾಯಿ!"

"ವಿಳಾಸ ಕೊಡಬಹುದೇ?"

ಕೂಡಲೇ ಒಂದು ಚೀಟಿನಲ್ಲಿ ಬರೆದು ಕೊಟ್ಟೆ. "ನಿಮ್ಮಿಂದ ಆಗಬೇಕಾದ ಉಪಕಾರವಿಷ್ಟೆ!" ಎಂದು ಅಧಿಕಾರಿಗಳು ನಾವು ಹೋಗಬೇಕೆಂದು ಸನ್ನೆಕೊಟ್ಟರು.

ನಾವು ಹೊರಟೆವು. ಮುಖವನ್ನೀಕಡೆಗೆ ತಿರುಗಿಸುವಾಗ ಅಲ್ಲಿ ಚಿಕ್ಕದೊಂದು ಚೂರಿ ಕಾಣಿಸಿತು. ಚೂರಿ . . . . ಹೌದು . . . . ನನ್ನ ಚೂರಿಯಂತೆಯೇ ಇದೆಯಲ್ಲ . . . . ನೆತ್ತರ ಕೆಸರನ್ನು ಮೆತ್ತಿದ ಹಾಗಿದೆ . . . . ಅಬ್ದುಲ್ಲನ ನೆತ್ತರು . . . . ಅವನ ಕೆಸರು . . . . ನನ್ನ ಚೂರಿ . . . ಫಕ್ಕನೆ ಕಾಲು ತಡೆಯಿತು. ಮುಖ ವಿವರ್ಣವಾಯಿತು. ಕಣ್ಣು ಕತ್ತಲಿಸುವಂತಾಯಿತು. ಇದನ್ನೆಲ್ಲ ನೋಡುತ್ತಿದ್ದ ಅಧಿಕಾರಿಗಳು "ನೀವು ಒಂದು ಕೊಲೆಯನ್ನು ಕಂಡು ಹೀಗಾದರೆ ದಿನಕ್ಕೆ ಹತ್ತಾರನ್ನು ಕಾಣುವ ನಮ್ಮ ಗತಿಯೇನು?" ಎಂದು ನಕ್ಕರು. ನಾನು ಉತ್ತರಕೊಡಲಿಲ್ಲ. ಹೆಣವನ್ನು ಕಂಡು ವ್ಯಸನ

ವಾಗಿತ್ತು; ಅಷ್ಟೆ . . . . ಚೂರಿಯು ಮಾತ್ರ ನನ್ನ ಮರ್ಮವನ್ನೆ ತಿವಿಯಿತು. ನನ್ನ ಕೈಯಿಂದ ತಾನಾಗಿ ರಸ್ತೆಗೆ ಹಾರಿದ ಚೂರಿಯದು . . . . ಬೇಕೆಂದು ಎಸೆದುದಲ್ಲ. ತಾನಾಗಿ ಬಿದ್ದುಹೋಗಿತ್ತು. ನೆಲದ ಮೇಲೆ ಬಿದ್ದು ಠಣ್ ಎಂದು ಶಬ್ದವಾದುದನ್ನು ಕೇಳಿದ್ದೆ . . . . ಅದು ಇಲ್ಲಿಗೆ ಹೇಗೆ ಬರಬೇಕು? ಆಗ ಹೆಚ್ಚಿನ ವಿಚಾರಕ್ಕೆ ಎಡೆಗೊಡಲಿಲ್ಲ. ಬಾಳೂರರು "ಬಾ ಬಾ" ಎಂದು ಕರೆಯುತ್ತಿದ್ದರು. ನನ್ನ ಹಜ್ಜೆ ಅವರ ಹಜ್ಜೆಯನ್ನು ಅನುಸರಿಸುತ್ತಿತ್ತು.

ಕಾರಿನ ಕಡೆಗೆ ಬಂದುದಾಯಿತು. ಕಾರಿನಲ್ಲಿ ಕುಳಿತುಕೊಳ್ಳುವ ವರೆಗೆ ಅವರ ತುಟಿ ಎರಡಾಗಿರಲಿಲ್ಲ. ಕಣ್ಣಿಟ್ಟು ನನ್ನ ಮುಖಭಾವ ಭಂಗಿಗಳನ್ನು ಪರಿಕಿಸುತ್ತಿದ್ದರೆಂದು ತೋರುತ್ತದೆ. ಕಾರಿನೊಳಗೆ ಕುಳಿತೊಡನೆ "ನನ್ನ ಮಾತು ಸತ್ಯವೆ ರಾಮಣ್ಣ ?" ಎಂದು ಕೇಳಿದರು.

"ಸಂದೇಹವೇನು? ನಿಮ್ಮದೇ ಸತ್ಯ . . . . ನನ್ನದೇ ಸುಳ್ಳು!" ಎಂಬ ಒಂದೇ ಒಂದು ಉತ್ತರದಿಂದ ಅವರ ಬಾಯಿಯನ್ನು ಮುಚ್ಚಿಸಬೇಕೆಂದಿದ್ದೆ? ಆದರೆ ಆ ಬಾಯಿ ಅಷ್ಟು ಸುಲಭವಾಗಿ ಮುಚ್ಚೀತೇ? "ನಂಬಕೂಡದು ನಂಬ ಕೂಡದು . . . . ಸರ್ವಥಾ ಆ ಜಾತಿಯನ್ನು ನಂಬ ಕೂಡದು. ನಿನ್ನ ಸ್ನೇಹಿತ ಶುದ್ಧ ಲುಚ್ಚ . . . . ನೀನು ಆತನ ದೃಷ್ಟಿಗೆ ಬಿದ್ದಿದ್ದರೆ ಖಂಡಿತ ವಾಗಿ ನಿನ್ನ ಚರ್ಮ ಸುಲಿಯುತ್ತಿದ್ದ" ಎಂದರು.

ಇರಬಹುದು; ನಾನು ಇದಿರಾಡಲಿಲ್ಲ. ಇದಿರಾಡುವ ಧೈರ್ಯವಾದರೂ ಎಲ್ಲಿ ?

ಕಾರು ಬಾಳೂರರ ಅಂಗಡಿಯ ಸಮೀಪಕ್ಕೆ ಬಂದು ನಿಂತಿತು. ಅವರು ಇಳಿದರು. ನನ್ನನ್ನು ಮುಟ್ಟಿಸುವಂತೆ ಡ್ರೈವರನಿಗೆ ಹೇಳಿದರು. "ರಾಮು ನಾಯಕರೆ! ನಿಮಗೆ ಈ ಬೊಂಬಾಯಿಯ ತಂಟೆ ಬೇಡ . . . . ಕಾಲು ಕೀಳಿರಿ ನೋಡೋಣ . . . . ದುಡ್ಡೊಂದು ಇದ್ದರೆ, ತಂದೆತಾಯಿಗಳ ಹೊರತು ಮತ್ತೆಲ್ಲ ಸಿಕ್ಕುತ್ತದೆ ಈ ಬೊಂಬಾಯಿಯಲ್ಲಿ. ಬಂಡಿಯ ಟಿಕೇಟು ಸಿಕ್ಕೀತೇ? ಎಂದು ಸಂಶಯ ಪಡಬೇಡಿ . . . . ಒಂದಕ್ಕೆ ಹತ್ತುಕೊಟ್ಟರಾಯಿತು. ನಿಮ್ಮ ಜೇಬಿಗೆ ಬಂದು ಬೀಳುತ್ತದೆ ಟಿಕೇಟು . . . . ನಡೆಯಿರಿ . . . ನಡೆಯಿರಿ . . . ಸಮುದ್ರದಲ್ಲಿ ಈಜಬೇಕಾದರೆ ಮೀನೇ ಆಗಬೇಕು. ಬೊಂಬಾಯಿಯಲ್ಲಿ ಇಂತಹ ಸಮಯದಲ್ಲಿ ಬಾಳುವುದಕ್ಕೆ ನನ್ನಂಥವರೇ ಸಮರ್ಥರು . . . ನಿನಗೆ ಈ ಕೆಲಸ ಬೇಡ" ಎಂದು ಬೋಧಿಸಿದರು.

"ಆಗಬಹುದು" ಎಂದು ನನ್ನ ಉತ್ತರ.

"ಹಾಗಾದರೆ ನಿಮ್ಮನ್ನು ಒಯ್ಯುವ ಟೀಕೇಟು ನಾಳೆ ನಿಮ್ಮ ಕೋಣೆಗೆ ತಲಪುವುದು. ಕೂಡಲೇ ಹೊರಡಿರಿ. ನನ್ನ ತಂದೆಯನ್ನು ಕಂಡರೆ ಕ್ಷೇಮ ವಾಗಿದ್ದಾನೆ ಎಂದುಬಿಡಿ. ಬೊಂಬಾಯಿ ಪಟ್ಟಣ ಸುಟ್ಟು ಭಸ್ಮವಾದರೂ ನಿಮ್ಮ ಮಗ ಆ ಬೆಂಕಿಕೆಂಡದ ರಾಶಿಯೊಳಗಿನಿಂದ ಎದ್ದು ಬಂದಾನು; ಎಂದು ಭರವಸೆ ಕೊಟ್ಟುಬಿಡಿ"—ಎನ್ನುತ್ತಾ ನನ್ನನ್ನು ಕಾರಿನಲ್ಲಿರಿಸಿ ಕೋಣೆಗೆ ಕಳುಹಿಸಿದರು.

x x x x

ಮರುದಿನ ಉಗಿಬಂಡಿಯಲ್ಲಿ ನನ್ನ ಶರೀರವೇನೋ ಕುಳಿತಿತ್ತು. ಆದರೆ ಧ್ಯಾನವೆಲ್ಲ ಆ ಘಟನೆಯದೆ . . . . ಅಬ್ದುಲ್ಲ ಕೊಲೆಪಾತಕಿಯಾಗುವುದು! ವೇಷಪಲ್ಲಟಿಸುವುದು! ನನ್ನ ಮೇಲೆ ಹೊಂಚುಹಾಕುವುದು! ನಮ್ಮ ಕೋಣೆಯ ಸಮೀಪದಲ್ಲಿ ಕೊಲೆಯಾದವನು ಅವನೇ ಆಗಿದರೆ, ನಾನು ಊಟ ಮುಗಿಸಿ ಬರುತ್ತಿದ್ದಾಗ ಪ್ರಾಚೀನ ಕರ್ಮದಂತೆ ಬೆಂಬತ್ತಿ ಬಂದ ನೆರಳು ಅವನದೇ ಆಗಿರಬೇಕು. ಅವನದೇ ಆಗಿದ್ದರೆ ಹತ್ತು ಜನ ಓಡಿಸಿದ ಜನವೂ ಅವನೆ. ರಾಜರಸ್ತೆಯೂ ಕಿರುಬೀದಿಯೂ ಕೂಡುವ ಸಂದಿನಲ್ಲಿ ಕೊರಳುಕೊಯಿಸಿ ಕೊಂಡಾತನೂ ಅವನೇ! ಇದು ನಿಶ್ಚಯವಾದರೆ ಬಾಳೂರರು ಆವನ ವಿಷಯ ವಾಗಿ ಹೇಳಿದ ಕತೆಯೂ ಸತ್ಯವಾಗಿರಬೇಕು. ಎಂದರೆ ಅಬ್ದುಲ್ಲನನ್ನು ಬಾಲ್ಯ ಸ್ನೇಹಿತನೆಂದು ಮಮತೆಯಿಂದ ನೋಡಿದ ನಾನೇ ಹುಚ್ಚ! ಇರಬಹುದು; ಎಂಥೆಂಥವರು ಏನೇನು ಆಗುವುದಿಲ್ಲ! ಅಬ್ದುಲ್ಲ ಬೊಂಬಾಯಿಯ ಈಗಿನ ಕಸುಬನ್ನು ಚೆನ್ನಾಗಿ ಅಭ್ಯಾಸಿಸಿರಬಹುದು. ಹಣದ, ಸುರೆಯ ಮೋಹದಿಂದ ತನ್ನನ್ನು ತಾನೇ ಮರೆತು ಆಡಿಸುವ ಕೈಗಳ ಬೊಂಬೆಯಾಗಿ ಎಷ್ಟೊ ಜನರನ್ನು ಕೊಂದ ಮೇಲೆ ತಾನೆ ಹೆಣವಾಗಿ ಬಿದ್ದುದಾಗಿರಬಹುದು. ಆದರೆ ಆತನಿಗೂ ಪಾತುಮ್ಮನಿಗೂ ನನ್ನಲ್ಲಿದ್ದ ಪ್ರೇಮ ಮಮತೆಗಳನ್ನೆಣಿಸುವಾಗ, ಹೀಗಾಗ ಬಹುದೆಂಬುದಕ್ಕೆ ಕಾರಣ ದೊರೆಯುವುದಿಲ್ಲ. ಆದುದಕ್ಕೆ ಅರ್ಥವಾಗುವುದಿಲ್ಲ. ಬಾಳೂರರನ್ನು, ಕೊನೆಗೆ ನನ್ನನ್ನು ನಾನೇ—ನಂಬಲಾಗುವುದಿಲ್ಲ; ಪ್ರಕೃತಿಯಲ್ಲಿ ನಡೆಯುವ ಪ್ರತಿಯೊಂದಕ್ಕೂ ಅರ್ಥವಾಗುವುದಿದ್ದರೆ, ಈ ಪ್ರಪಂಚದಲ್ಲಿ ಸ್ವಾರಸ್ಯವೇನಿದೆ? . . . . ಇದೊಂದು ಅರ್ಥವಾಗದ ಘಟನೆ.

x x x x

ಮಂಗಳೂರಿನಲ್ಲಿ ಬಂದಿಳಿದಾಗ ಮೃತ್ಯುವಿನ ಸಾಮ್ರಾಜ್ಯದಿಂದ ತಪ್ಪಿಸಿ

ಕೊಂಡು ಬಾಳಿನ ಬುಡಕ್ಕೆ ಕಾಲಿಟ್ಟಂತಹ ಸಂತೋಷವಾಯಿತು. ಆ ದಿನ ಪರಿಚಿತರೊಬ್ಬರಲ್ಲಿ ಉಳಿದುಕೊಂಡು ಮರುದಿನವೇ ಊರಿಗೆ ಹೊರಟೆ. ಮಧ್ಯಾಹ್ನ ಹಳ್ಳಿಯನ್ನು ಸೇರಿದುದಾಯಿತು. ತಾಯಿಯನ್ನು ಕಂಡು ಉದ್ದಂಡ ವಾಗಿ ಅವಳ ಪಾದಗಳ ಮೇಲೆ ಕೆಡೆದೆ.

"ಬದುಕಿ ಬಂದೆಯೋ ಮಗನೇ" ಎನ್ನುತ್ತ ತಾಯಿ ಗದ್ಗದ ಧ್ವನಿಯಿಂದ ನನ್ನನ್ನು ಸ್ವಾಗತಿಸಿದಳು. ಮತ್ತೆ ದುಃಖದ ಅಣೆಕಟ್ಟನ್ನು ಕಿತ್ತ ಹಾಗಾಯಿತು. ತಂದೆ ಸತ್ತಾಗಲೂ ಅಮ್ಮನು ಈ ಪರಿ ಅತ್ತುದಿಲ್ಲ. ಒಣಗಿದ ಮರಕ್ಕೆ ಬೆಂಕಿ ಹತ್ತಿದ್ದರೆ ಅದು ಕೂಡಲೆ ಭಸ್ಮವಾಗುತ್ತದೆ. ಹಸಿ ಮರಕ್ಕೆ ಹಿಡಿದರೆ ಬೆಂಕಿಯೇ ನಂದಿಹೋಗುತ್ತದೆ. ಐವತ್ತೈದು ವರ್ಷಗಳಾಗಿದ್ದರೂ ನನ್ನ ತಾಯಿ ಒಣಗಿ ಹೋಗಿರಲಿಲ್ಲ. ಹಸಿಮರದ ಹಾಗೆ ನೆಲವನ್ನು ಆತುಕೊಂಡಿದ್ದಳು. ಪುತ್ರ ವಾತ್ಸಲ್ಯವೇ ಆ ಒಡಲಲ್ಲಿ ಸಂಚರಿಸುತ್ತಿದ್ದ ರಸ! ಜೀವನ ರಸ!

ಕ್ಷೇಮ ಸಮಾಚಾರವಾಯಿತು; ಊಟವಾಯಿತು; ನಾನು ಮರಳಿ ಬಂದೆನಲ್ಲ; ತನ್ನ ಒಡವೆ ತನ್ನ ಮುಷ್ಟಿಯೊಳಗೆ ಬಂತಲ್ಲ! ಎಂಬ ಹಿಗ್ಗಿನಿಂದ ತಾಯಿ ಅತ್ತಿತ್ತ ಓಡಾಡುತ್ತಿದ್ದಳು. ಅಬ್ದುಲ್ಲನ ಮಾತನ್ನು ಎತ್ತುವಳೋ ಎಂದು ನನ್ನ ಹೆದರಿಕೆ! ಕೇಳದೆ ಬಿಡುತ್ತಾಳೆಯೇ ಆಕೆ? ಅವಳಂತೆ ಪಾತುಮ್ಮನೂ ಒಬ್ಬಳು ಬಡವಿಧವೆ. ನನ್ನಂತೆ ಅಬ್ದುಲ್ಲನೂ ಬಡವಿಧವೆ ಯೊಬ್ಬಳ ಮಗ .... "ಅಬ್ದುಲ್ಲ ಬಂದನೇ?" ಎಂದು ಕೇಳಿಯೇ ಬಿಟ್ಟಳು.

"ಅಬ್ದುಲ್ಲ!" ಎಂದಿಷ್ಟೆ ಹೇಳಿ ಮಾತನ್ನು ನಿಲ್ಲಿಸಿದೆ.

"ಹೌದು; ಅಬ್ದುಲ್ಲ! ಪಾಪ .... ಆ ಮುದಿ ಹೆಂಗಸು ಮೊನ್ನೆಯ ವರೆಗೆ ದಾರಿನೋಡುತ್ತಲೇ ಇದ್ದಳು. ಪಾಪ .... ಮೊನ್ನೆ ಅವನ ಕಾಗದ ವನ್ನು ಎದೆಯ ಮೇಲಿಟ್ಟುಕೊಂಡು ಕಣ್ಣುಗಳನ್ನು ಮುಚ್ಚಿದಳು. ಉಸಿರು ಗಾಳಿಯಲ್ಲಿ ತೇಲಿಹೋಯಿತು."

"ಪಾತುಮ್ಮ ಸತ್ತಳೇ!"

"ಸಾಯದಿರುತ್ತಾಳೆಯೆ .... ಯಾವ ಒಂದು ಜೀವದ ಮೇಲೆ ಆಸೆ ಯಿಟ್ಟು ಇದುವರೆಗೆ ಎಕ್ಕುವ ಉಸಿರನ್ನು ಇಟ್ಟುಕೊಂಡಳೋ, ಆ ಜೀವ ಇದ್ದರೂ ಇಲ್ಲದಂತಾಗಿರುವಾಗ ಆ ಹೆಣ್ಣು ಸಾಯದೇನು ಮಾಡುತ್ತಾಳೆ?"

ಪಾತುಮ್ಮನನ್ನು ಇದಿರಿಸುವ ಸಂದರ್ಭ ತಪ್ಪಿತೆಂಬುದರಿಂದ ನನಗೆ

ಒಂದಿಷ್ಟು ಸಮಾಧಾನವಾಗದಿರಲಿಲ್ಲ. ಆದುದನ್ನೆಲ್ಲ ತಾಯಿಗೆ ಬಿಚ್ಚಿಹೇಳುವ
ದಕ್ಕೆ ಮನಸ್ಸು ಅಳುಕದಿರಲೂ ಇಲ್ಲ. "ಹೌದು, ನೀನು ಹೇಳಿದುದು ನಿಜ"
ಎಂದಿಷ್ಟೇ ಹೇಳಿದಾಗ ನನ್ನ ಮುಖ ಕತ್ತಲಿಸಿತು.

ತಾಯಿ ಮುಂದುವರಿಸಿದಳು: ಅವನ ಕಾಗದ ಬಂದು ಎಂಟು ದಿವಸ
ಗಳಾದುವು. ನಿನ್ನ ಮಾವಯ್ಯನೇ ಓದಿಹೇಳಿದರು. ಆ ಪತ್ರದ ಸಂಗತಿ
ಯನ್ನು ಏನು ಹೇಳಲಿ? ಬೊಂಬಾಯಿ ಒಂದು ನರಕವಂತೆ. ಹಿಂದೂ-
ಮುಸಲ್ಮಾನರು ಒಬ್ಬರೊಬ್ಬರಿಗೆ ಚೂರಿಹಾಕುವುದಂತೆ. ಅಬ್ದುಲ್ಲನಿಗೆ
ಬದುಕು ಕಷ್ಟವಾಗಿದೆಯಂತೆ. ಅವನ ಧನಿಗಳು ದೊಡ್ಡ ಪುಂಡರಾಗಿದ್ದರಂತೆ.
ಅವರ ಹೇಳಿಕೆಯಂತೆ ನಡೆಯಲು ಒಪ್ಪದ ಕಾರಣ, ಅಬ್ದುಲ್ಲ ಕೆಲಸ ಕಳೆದು
ಕೊಂಡ. ಕೈಯಲ್ಲಿದ್ದ ಪುಡಿಕಾಸುಗಳನ್ನು ವೆಚ್ಚಮಾಡಿ ದಿನ ನೂಕಿದ.
ಬರುವಾಗ ಏನಾದರೂ ತರಬೇಕು—ಎಂದು ಸಂಪಾದನೆಗಾಗಿ ಒಂದೆರಡು
ತಿಂಗಳು ಅಲೆದ. ಈಗ ಈ ಕಿಚ್ಚು ಹಿಡಿಯಿತು. ತಾಯಿಗೆ ಯಾರ ಕೈ
ಯಿಂದಲೋ ಒಂದು ಪತ್ರ ಬರೆಯಿಸಿದ. ಈಗ ಹಿಂದುಗಳ ಮಠಾರಕ್ಕೆ
ಮುಸಲ್ಮಾನರೂ, ಮುಸಲ್ಮಾನರ ಮಠಾರಕ್ಕೆ ಹಿಂದುಗಳೂ ಹೋಗುವುದು
ಅಪಾಯಕರ. ಹೀಗಿದ್ದರೂ ಏನಾದರೂ ಮಾಡಿ ರಾಮಣ್ಣನನ್ನು ನೋಡು
ತ್ತೇನೆ. ಕೈಯಲ್ಲಿರಬಹುದಾದುದನ್ನು ಅವನ ವಶಕ್ಕೆ ಒಪ್ಪಿಸುತ್ತೇನೆ. ಕೆಟ್ಟ
ವರ ಸಹವಾಸದಿಂದ ಕೆಡುಕನಾದೆ. ಬೊಂಬಾಯಿಯ ಹಣವನ್ನು ಅಲ್ಲಿಯೇ
ಹಾಳುಮಾಡಿದೆ. ಈಗ ಉಳಿದುದೇನೂ ಇಲ್ಲ. ಒಡಲನ್ನು ಸವೆಯಿಸಿ
ಏನಾದರೂ ದೊರೆತರೆ ಅದನ್ನು ಉಗಿಬಂಡಿಗಾಗಿ ವೆಚ್ಚಮಾಡಿ ಬರಿಕೈಯಲ್ಲಿ
ಊರಿಗೆ ಬರಬೇಕೆ? ಅಬ್ದುಲ್ಲ ಸಾಯಲಾರ. ಆತನ ತಲೆಗೆ ಬಂಡೆಕಲ್ಲು
ಗಳನ್ನು ಹೊತ್ತುಹಾಕಿದರೂ ಸಾಯಲಾರ. ಅಲ್ಲನು ನನಗೆ ಆಯುಷ್ಯ
ಕೊಟ್ಟಿದ್ದಾನೆ. ನಿನಗೂ ಒಂದೆರಡು ವರ್ಷಗಳ ಜೀವಮಾನವನ್ನು ಕೊಟ್ಟರೆ
ಹಣವಂತನಾದ ಅಬ್ದುಲ್ಲನನ್ನು ಕಾಣುವೆ. ಕೊಡದಿದ್ದರೆ ಮಾಡುವುದೇನು
ಸತ್ತುಬೀಳುವ ಒಡಲು ತಾನು ಹುಟ್ಟಿಬಂದ ಮಣ್ಣನ್ನು ಸೇರಬೇಕಾದರು
ದುಡ್ಡು ಬೇಕಲ್ಲವೆ? ದುಡ್ಡುಕೊಡದ ಹೆಣವನ್ನು ಮಣ್ಣು ಮುಟ್ಟದು.
ಮಣ್ಣುಕೂಡಿಸುವುದಕ್ಕೆ ಬೇಕಾದಷ್ಟು ಹಣವನ್ನಾದರೂ ರಾಮಣ್ಣನ ಕೈಗೆ
ಕೊಡುತ್ತೇನೆ . . . . ಎಂದಿತ್ತು ಪತ್ರದಲ್ಲಿ. ಪಾತುಮ್ಮನಿಗೆ ಈ ಲೋಕದ
ನೀರು ಮುಗಿಯಿತು ಮಗು . . . . ಮುಗಿಯದಿರುತ್ತಿದ್ದರೆ, ಒಳ್ಳೆಯ ದಾರಿ
ಯನ್ನು ಹಿಡಿದ ಬಡಹುಡುಗನನ್ನು ಕಂಡು ಸಂತೋಷದಿಂದ ಸಾಯುತ್ತಿದ್ದ

ಲ್ಲವೇ? ಎಂದು ತಾಯಿ ಕತೆಯನ್ನು ನಿಲ್ಲಿಸಿ, "ಅಬ್ದುಲ್ಲ ಬರುವುದಿಲ್ಲ! ಎಂದನೆ?" ಎಂದು ಪ್ರಶ್ನಿಸಿ ಕಣ್ಣೀರು ಸುರಿಸಿದಳು.

"ಹಾಗೆ ಹೇಳಲಿಲ್ಲ!"

"ಅವನು ಕಣ್ಣಿಗೆ ಸಿಕ್ಕಲಿಲ್ಲವೆ?"

"ಸಿಕ್ಕಿತು ಅವನ ಹೆಣ!"

"ಇದರರ್ಥವೇನು ಮಗು?" ಎಂದು ತಾಯಿ ಉದ್ವೇಗದಿಂದ ಕೇಳಿದಳು.

"ತಿವಿಯಿಸಿಕೊಂಡು ಬೀದಿಯಲ್ಲಿ ಬೀಳುತ್ತಾರಲ್ಲ! ಅವರಂತೆ ಅವನೂ ಆದ!"

"ಹೀಗೂ ಆಯಿತೆ? ಚಿನ್ನದಂಥ ಹುಡುಗನಾಗಿದ್ದನಲ್ಲ . . ಪಾತುಮ್ಮ! ನೀನೆ ಪುಣ್ಯವಂತೆ. ಮಗನ ಸಾವಿನ ಸುದ್ದಿ ಬರುವ ಮುಂಚೆ ಈ ಹಾಳು ಲೋಕವನ್ನು ಬಿಟ್ಟೆಯಲ್ಲ!" ಎನ್ನುತ್ತಾ ತಾಯಿ ಕಣ್ಣೀರು ಸುರಿಸಿದಳು. ಪಾತುಮ್ಮನ ಸ್ಥಾನದಲ್ಲಿ ತನ್ನನ್ನಿರಿಸಿ ತಾಯಿ ಆಡಿದ ಮಾತಿದು. ಅವಳ ಅಂತಃಕರಣವು ಕರಗಿದುದು ಯಾರೊ ಒಬ್ಬಳ ಮಗನ ಕರುಣ ಕಥೆಯಿಂದಲ್ಲ. ತಾನೇ ಅನುಭವಿಸಿ ತನ್ನ ಕರುಳೇ ಬೆಂದು ಕುದಿದ ಬೇಗೆಯಿಂದ. ನನ್ನ ಕಣ್ಣ ಮುಂದೆ ಒಬ್ಬಳೇ ಒಬ್ಬಳು ತಾಯಿಯಿದ್ದಳು; ಅಬ್ದುಲ್ಲನಿಗೂ ನನಗೂ ಒಬ್ಬಳೇ ತಾಯಿಯಾಗಿ ಕಣ್ಣ ಮುಂದೆ ಗೋಚರಿಸುತ್ತಿದ್ದಳು. ಹಿಂದುಸ್ಥಾನ ಪಾಕಿಸ್ಥಾನ ಎಂದು ಒಬ್ಬರು ಇನ್ನೊಬ್ಬರನ್ನು ತಿವಿಯಬೇಕೇ? ಮಗು . . . ಇದರಿಂದ ಆಗುವುದು ಪಾಕಿಸ್ಥಾನವೂ ಅಲ್ಲ; ಹಿಂದುಸ್ಥಾನವೂ ಅಲ್ಲ— ಭೂತಸ್ಥಾನ!" ಎಂದು ಒದರುತ್ತಾ ಅವಳು ತನ್ನ ಕೆಲಸಕ್ಕೆ ನಡೆದಳು.

ಆಕೆ ಒಳಗೆ ಹೋದ ಮೇಲೆ ನನ್ನ ಹೃದಯದ ಯಾತನೆ ಸಹನಾತೀತವಾಯಿತು. ಅಬ್ದುಲ್ಲ ಸತ್ತ . . . ತಿವಿಸಿಕೊಂಡು ಸತ್ತ . . . ನಾನು ತಿವಿಯದಿದ್ದರೂ ನನ್ನ ಚೂರಿಯೇ ಅವನಿಗೆ ಮೃತ್ಯುವಾದಂತಿತ್ತು. 'ಅಣ್ಣ'ನ ಚೂರಿ 'ತಮ್ಮ'ನೆದೆಗೆ . . . . . ಇದು ಹೇಗಾಯಿತೆಂಬುದನ್ನು ತಿಳಿಯುವುದೂ ಬೇಕಾಗಿರಲಿಲ್ಲ; ತಾಯಿಗೆ ತಿಳಿಸುವುದೂ ಬೇಕಾಗಿರಲಿಲ್ಲ. ಇಂದು ಅಬ್ದುಲ್ಲನ ದಿನ. ನಾಳೆ ನನ್ನದೂ . . . ಅವನ ಮರಣದಿಂದ ನನ್ನ ಮರಣದವರೆಗೆ ಕೆಲವು ದಶವರ್ಷಗಳಿರಲೂ ಬಹುದು. ಪಾತುಮ್ಮ ಸತ್ತಳು . . . ತನ್ನ ಮಗನ ಉದ್ಧಾರಕನು ರಾಮಣ್ಣನೆಂಬ ಧೃಢ ವಿಶ್ವಾಸದಿಂದ ಸತ್ತಿರಬಹುದು.

ಪಾತುಮ್ಮನೂ ಪ್ರೇತವಾಗುತ್ತಾಳೆ. ಪ್ರೇತವಾಗಿ ಚೋರಿಯ ಮೂಲವನ್ನು ತಿಳಿಯುತ್ತಾಳೆ. ಆ ರಾತ್ರಿ; ನಾನು ಊಟ ತೀರಿಸಿ ಬರುತ್ತಿದ್ದುದು; ಒಂದು ನೆರಳು ನನ್ನನ್ನು ಹಿಂಬಾಲಿಸಿದುದು; ನಾನು ಸ ದಿಂದ ಓಡಿದುದು; ಕೊನೆಗೆ ಅದೇ ಅಬ್ದುಲ್ಲನಿಗೆ ಮೃತ್ಯುವಾಗಿ ಪರಿಣಮಿ . . . ಈ ಗುಟ್ಟು ಆ ಮುದುಕಿಯ ಪ್ರೇತಕ್ಕೆ ತಿಳಿಯದಿರವುದೇ? ಆಗ ಒಬ್ಬನೇ ಒಬ್ಬ ಕಂದಯ್ಯನನ್ನು ಏನು ಮಾಡಿಬಿಟ್ಟೆ ರಾಮಣ್ಣ . . . ಹೇಳಿದುದೇನು? ಮತ್ತೆ ಮಾಡಿದುದೇನು?—ಎಂದು ಕೇಳಿದರೆ ಕೊಡತಕ್ಕ ಉತ್ತರವೇನು?

Printed at
The Kanara Printing Works, Mangalore–P. I. C. S K. No. 37
for
U. R. Shenoy & Sons-P. I C. No. S. K. 3—1000